27 September 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನಕ್ಕೊಂದು ಅರ್ಥ ಸಿಗಬೇಕಾದರೆ, ಮಾನವೀಯತೆ ಉಳಿಸಿಕೊಳ್ಳಲೇ ಬೇಕು!

-ಸ್ನೇಹಾ ಆನಂದ್



ಪೊಲೀಸರ ವರ್ತನೆ ವಿರುದ್ಧ ಹೆಚ್‌ಡಿಕೆ ಕಿಡಿ — ಪುಟ ಸಂ. 2



ಪುಟ ಸಂ. 3 — ಕುಡಿಯುವ ನೀರಿನ ಕಾಮಗಾರಿ ತ್ವರಿತ ಪೂರ್ಣಗೊಳಿಸಿ



ಗುಂಡ್ಲುಪೇಟೆ ಆಡಳಿತ ವ್ಯವಸ್ಥೆ ಹದಗೆಟ್ಟಿದೆ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 283 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಹಾಲು ದರ ಹೆಚ್ಚಳ: ಸಂಪುಟದಲ್ಲಿ ನಿರ್ಧಾರ

**ಬೆಂಗಳೂರು:** ಹಾಲಿನ ದರ ಹೆಚ್ಚಳದ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ಜಿಲ್ಲಾ ಹಾಲು ಒಕ್ಕೂಟಗಳ ಅಧ್ಯಕ್ಷರು ನನ್ನನ್ನು ಭೇಟಿಯಾಗಿ 12 ರೂ. ಹೆಚ್ಚಳ ಮಾಡಿ, ಅದರಲ್ಲಿ 2 ರೂ. ಸಂಘಗಳಿಗೆ ಕೊಡುವಂತೆ ಮನವಿ ಮಾಡಿದ್ದಾರೆ ಎಂದರು.

ನೆರೆ ರಾಜ್ಯಗಳಾದ ತೆಲಂಗಾಣ, ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿನ ಪರಿಸ್ಥಿತಿಯ ಬಗ್ಗೆ ವರದಿ ಪಡೆದು, ಪರಿಶೀಲಿಸಿದ ನಂತರ ಮುಂದಿನ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ಹಾಲಿನ ಪ್ರಸ್ತುತ ದರದಿಂದ ಸಂಘಗಳಿಗೆ ನಷ್ಟವಾಗುತ್ತಿದೆ. ಬೆಲೆ ವಿಚಾರದಲ್ಲಿ ರೈತರಲ್ಲಿ




ಆಕ್ರೋಶವಿದೆ. 50 ಸಾವಿರ ಹಾಲು ಉತ್ಪಾದಕರು ಹಾಲಿನ ದರ ಏರಿಕೆಗೆ ಆಗ್ರಹಿಸಿದ್ದಾರೆ. ರೈತರನ್ನು ಹಾಗೂ ಒಕ್ಕೂಟಗಳನ್ನು ರಕ್ಷಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ ಎಂದು ಸಿಎಂ ಹೇಳಿದರು.

## ನರಭಕ್ಷಕ ಹುಲಿ ಸೆರೆ

**ಚಾಮರಾಜನಗರ:** ರೈತನ ಮೇಲೆ ದಾಳಿ ಮಾಡಿ ಕೊಂದು ತಿಂದಿದ್ದ ಹುಲಿಯನ್ನು ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಕೊನೆಗೂ ಸೆರೆ ಹಿಡಿದಿದೆ.

ಚಾಮರಾಜನಗರ ತಾಲೂಕಿನ ಬಡಗಲಪುರದಲ್ಲಿ ರೈತ ಬಸವಣ್ಣ ಮೇಲೆ ದಾಳಿ ಮಾಡಿ ಭಕ್ಷಿಸಿದ್ದ ಹುಲಿಯನ್ನು ತಾವರೆಕಟ್ಟೆ ಮೋಳೆ ಗ್ರಾಮದ ಮರಗದಕೆರೆ ಬಳಿ ಸಾಕಾನೆಗಳಾದ ಕಂಜನ್ ಮತ್ತು ಈಶ್ವರ್ ಸಹಾಯದಿಂದ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಗಿದೆ. ಸೆರೆಯಾದ ಗಂಡು ವ್ಯಾಘ್ರ 6 ರಿಂದ 7 ವರ್ಷದ್ದು ಎಂದು ಅಂದಾಜು ಮಾಡಲಾಗಿದೆ.

ಎರಡು ಡ್ರೋನ್, ಶ್ವಾನದಳ ಮತ್ತು ಹುಲಿ ಜಾಡು ಪತ್ತೆಹಚ್ಚುವ ನುರಿತ ಗಿರಿಜನರು ಸೇರಿದಂತೆ 65ಕ್ಕೂ ಹೆಚ್ಚು ಮಂದಿ ಹುಲಿ ಸೆರೆ



ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಾಧಿಕಾರಿ ಬಿ.ಎಸ್.ಶ್ರೀಪತಿ ಮಾಹಿತಿ ನೀಡಿದರು.

ಸೆ.14ರ ಸಂಜೆ ಚಾಮರಾಜನಗರ ತಾಲೂಕಿನ ಬಡಗಲಪುರ ಗ್ರಾಮದ ಜಮೀನಿನಲ್ಲಿ ಹುಲಿ ದಾಳಿಗೆ ರೈತ ಬಸವಣ್ಣ ಮೃತಪಟ್ಟಿದ್ದರು. ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಿಬ್ಬಂದಿ ಸೆ.15ರಿಂದಲೂ ಹುಲಿ ಸೆರೆ ಕಾರ್ಯಾಚರಣೆ ನಡೆಸಿದ್ದರು.

## ಗ್ರಾಹಕರ ಹಣ ಗುಳುಂ: ಬ್ಯಾಂಕ್ ಮ್ಯಾನೇಜರ್‌ಗೆ 1 ವರ್ಷ ಜೈಲು ಶಿಕ್ಷೆ

**ಮೈಸೂರು:** ಮೃತ ಗ್ರಾಹಕರ ಖಾತೆ ಹಾಗೂ ಬ್ಯಾಂಕ್‌ನ ಆಂತರಿಕ ಖಾತೆಯಿಂದ ಒಟ್ಟು 61.57 ಲಕ್ಷ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡು ದುರುಪಯೋಗಪಡಿಸಿಕೊಂಡಿದ್ದ ಎಸ್‌ಬಿಐ ಮಾಜಿ ಚೀಫ್ ಮ್ಯಾನೇಜರ್‌ಗೆ ಮೈಸೂರಿನ ನ್ಯಾಯಾಲಯ ಒಂದು ವರ್ಷ ಕಠಿಣ ಶಿಕ್ಷೆ ಮತ್ತು 50 ಸಾವಿರ ದಂಡ ವಿಧಿಸಿದೆ.

2005ರ ಏಪ್ರಿಲ್ 7ರಂದು ಮೃತಪಟ್ಟಿದ್ದ ಗ್ರಾಹಕ ಕೃಷ್ಣ ಅಯ್ಯರ್ ಅವರ ಖಾತೆಯಿಂದ 2009ರ ಮೇ 13ರಿಂದ 2011ರ ಡಿಸೆಂಬರ್ 23ರ ಅವಧಿಯಲ್ಲಿ, 40.53 ಲಕ್ಷ ಹಾಗೂ ಬ್ಯಾಂಕ್‌ನ ಆಂತರಿಕ ಖಾತೆಯಿಂದ 21.04 ಲಕ್ಷ ಸೇರಿದಂತೆ ಒಟ್ಟು 61.57 ಲಕ್ಷ ಹಣವನ್ನು ಆರೋಪಿ ತನ್ನ ಹಾಗೂ ತನ್ನ ಪುತ್ರನ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು ಡ್ರಾ ಮಾಡಿಕೊಂಡಿದ್ದರು ಎಂದು ಪ್ರಕರಣ ದಾಖಲಾಗಿತ್ತು. ಪ್ರಕರಣ ಬೆಳಕಿಗೆ ಬಂದ ನಂತರ ಆರೋಪಿ ಅಕ್ರಮವಾಗಿ ಹಣ ಡ್ರಾ ಮಾಡಿಕೊಂಡಿರುವುದನ್ನು ಒಪ್ಪಿಕೊಂಡು 62 ಲಕ್ಷವನ್ನು ಬ್ಯಾಂಕ್‌ಗೆ ಮರುಪಾವತಿಸಿದ್ದರು. ಈ ಸಂಬಂಧ ಮೈಸೂರಿನ ಕೆ.ಆರ್. ಪೊಲೀಸ್ ಠಾಣೆಯಲ್ಲಿ ಪುಟ 2ಕ್ಕೆ

# ಸಿಎಂ ಸ್ಥಾನಕ್ಕೆ ಪೈಪೋಟಿ ಬೇಡ

## ಹೈಕಮಾಂಡ್ ನಿಂದ ಸಿಎಂ ಅಭ್ಯರ್ಥಿ ತೀರ್ಮಾನ: ಬಿ.ವೈ.ವಿಜಯೇಂದ್ರ



**ಬೆಂಗಳೂರು:** ಎಚ್.ಡಿ.ಕುಮಾರಸ್ವಾಮಿ ಹಾಗೂ ನನ್ನ ನಡುವೆ ಮುಖ್ಯಮಂತ್ರಿ ರೇಸ್ ಸೃಷ್ಟಿಸಬೇಡಿ. ಚುನಾವಣೆ ನಂತರ ಸಿಎಂ ಯಾರು ಅನ್ನೋದನ್ನು ಹೈಕಮಾಂಡ್ ತೀರ್ಮಾನಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದರು.

ಬೆಂಗಳೂರಿನ ಖಾಸಗಿ ಹೊಟೇಲಿನಲ್ಲಿ ಶನಿವಾರ ದೋಸ್ತಿ ನಾಯಕರು ಮಹತ್ವದ ಸಭೆ ನಡೆಸಿದರು. ಸಭೆಯಲ್ಲಿ ಮಾತನಾಡಿದ ವಿಜಯೇಂದ್ರ,

ಮುಂದಿನ ಚುನಾವಣೆಯಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರೋದು ನಿಶ್ಚಿತ. ಮುಂಬರುವ ಬಿಜೆಪಿ–ಜೆಡಿಎಸ್ ಸರ್ಕಾರ ರಚಿಸುವ ಚರ್ಚೆಯ ಜೊತೆಗೆ ಮುಂದಿನ ಸಿಎಂ ಬಗ್ಗೆಯೂ ಚರ್ಚಿಸಲಾಗಿದೆ. ಮುಂದಿನ ಸಿಎಂ ಯಾರು ಅಂತ ಹೈಕಮಾಂಡ್ ನಿರ್ಧಾರ ಮಾಡಲಿದೆ. ಇದರ ಬಗ್ಗೆ ಮುಖಂಡರು, ಕಾರ್ಯಕರ್ತರು ಬಹಿರಂಗ ಚರ್ಚೆ ನಡೆಸಬಾರದು. ಹೆಚ್‌ಡಿಕೆ–ವಿಜಯೇಂದ್ರ ಪರ ಅಥವಾ ವಿರುದ್ಧ ಹೇಳಿಕೆ, ಘೋಷಣೆ ಮಾಡಬಾರದು ಎಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿ, ಮುಂದಿನ ಎಲ್ಲ ಚುನಾವಣೆಗಳನ್ನೂ ಎನ್‌ಡಿಎ ಮೈತ್ರಿಯಡಿ ಒಗ್ಗಟ್ಟಿನಿಂದ ಎದುರಿಸಬೇಕು. ಬಿಹಾರ ಮಾದರಿಯಲ್ಲಿ ಮುಂದಿನ ಚುನಾವಣೆ ನಡೆಸಬೇಕು. 180 ಸ್ಥಾನ ಗೆಲ್ಲಲು ಶ್ರಮಿಸಬೇಕು ಎಂದು ಹೇಳಿದರು.

ಕುಮಾರಸ್ವಾಮಿ ಅಭಿಪ್ರಾಯವನ್ನು ಬಿಜೆಪಿ ನಾಯಕರು ಸ್ವಾಗತಿಸಿದರು. ಸ್ಥಳೀಯ ಕಾರ್ಯಕರ್ತರು, ನಾಯಕರಿಗೆ ಈ ಟಾರ್ಗೆಟ್ ರೀಚ್ ಮಾಡಬೇಕು ಎಂದ ನಿರ್ಣಯಿಸಿದ ದೋಸ್ತಿ ನಾಯಕರು ಬಿಹಾರ ಮಾದರಿಯಲ್ಲಿ ಚುನಾವಣೆ, ಟಾರ್ಗೆಟ್ 180 ಅಂತ ಸಭೆಯಲ್ಲಿ ಘೋಷಣೆ ಮೊಳಗಿಸಿದರು

## ಕೆಪಿಎಸ್‌ಸಿ ಅಕ್ರಮ: ಕಾಕ್ರೋಚ್ ಮೌನ

### ಕರ್ನಾಟಕದ ಭ್ರಷ್ಟಾಚಾರ ಗೊತ್ತಿಲ್ಲವೇ: ಎಚ್.ಡಿ.ಕುಮಾರಸ್ವಾಮಿ ಪ್ರಶ್ನೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್ಸಿ) ನಡೆದಿರುವ ಅಕ್ರಮಗಳ ಬಗ್ಗೆ ಕಾಕ್ರೋಚ್ ಜನತಾ ಪಾರ್ಟಿ ಏಕೆ ಮೌನವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಜೆಡಿಎಸ್ ಮತ್ತು ಬಿಜೆಪಿಯ ಸಮನ್ವಯ ಸಮಿತಿ ಸಭೆಗೆ ಮುನ್ನ ಶನಿವಾರ ಅವರು ಮಾಧ್ಯಮಗಳ ಜತೆ ಮಾತನಾಡಿದರು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಆಯಿತು ಎಂದು ಗಲಾಟೆ ಎಬ್ಬಿಸಿದ ಕಾಕ್ರೋಚ್ ಜನತಾ ಪಾರ್ಟಿ ಮತ್ತು ಜೆನ್‌ಜಿ ಗಳು ಈಗೆಲ್ಲಿ ಹೋಗಿದ್ದಾರೆ? ಅವರಿಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಮಿತಿಮೀರಿದ ಭ್ರಷ್ಟಾಚಾರ ಮತ್ತು ಕೆಪಿಎಸ್ಸಿಯಲ್ಲಿ ನಡೆದಿರುವ ಎಇಇ ನೇಮಕಾತಿ ಅಕ್ರಮ ಹಾಗೂ ಪಶು ವೈದ್ಯರ ನೇಮಕಾತಿ ಅಕ್ರಮವನ್ನು ಪ್ರಶ್ನಿಸುತ್ತಿಲ್ಲ ಏಕೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಕರ್ನಾಟಕದಲ್ಲಿ ಕಡುಭ್ರಷ್ಟ ಸರ್ಕಾರ ಆಡಳಿತ ನಡೆಸುತ್ತಿದೆ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕಕ್ಕೆ ದೊಡ್ಡಮಟ್ಟದ ಕೆಟ್ಟ ಹೆಸರು ಬರುತ್ತಿದೆ ವಾಗ್ದಾಳಿ ನಡೆಸಿದರು. ಪುಟ 2ಕ್ಕೆ

## ಯಾವ ಪುರುಷಾರ್ಥಕ್ಕೆ ಪ್ರತಿಭಟನೆ

ಕೇಂದ್ರ ಚುನಾವಣಾ ಆಯೋಗ ವಿರುದ್ಧ ಕಾಂಗ್ರೆಸ್ ಯಾವ ಪುರುಷಾರ್ಥಕ್ಕಾಗಿ ಪ್ರತಿಭಟನೆ ಮಾಡುತ್ತಿದೆ? ಚುನಾವಣಾ ಆಯೋಗ ಒಂದು ಜವಾಬ್ದಾರಿಯುತ ಸಂಸ್ಥೆ. ಕಳೆದ 78 ವರ್ಷಗಳಿಂದ ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿದುಕೊಂಡು ಬಂದಿದ್ದರೆ ಅದು ಚುನಾವಣಾ ಆಯೋಗದ ಜವಾಬ್ದಾರಿಯಿಂದಲೇ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಆಯೋಗದ ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರ ನಡುವೆ ಇರುವ ಅಭಿಪ್ರಾಯ ಭೇದದ ಬಗ್ಗೆ ಮಾಧ್ಯಮಗಳಲ್ಲಿ ಬಂದ ವರದಿಯನ್ನು ಇಟ್ಟುಕೊಂಡು ಅದನ್ನೇ ದೊಡ್ಡ ಅಪರಾಧದಂತೆ ಬಿಂಬಿಸಿ ದೇಶದಾದ್ಯಂತ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಟೀಕಿಸಿದರು. ಪುಟ 2ಕ್ಕೆ

## ಮಾಫಿ ಸಾಕ್ಷಿ ತಡೆಗೆ ದರ್ಶನ್ ಮತ್ತೆ ಯತ್ನ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ತಮ್ಮ ವಿರುದ್ಧವೇ ತಿರುಗಿಬಿದ್ದು, ಮಾಫಿ ಸಾಕ್ಷಿ ಹೇಳಲು ನಿರ್ಧರಿಸಿರುವ ಪ್ರದೋಷ್ ನನ್ನು ತಡೆಯಲು ಒಂದಾದ ಮೇಲೊಂದರಂತೆ ಪ್ರಯತ್ನ ನಡೆಸುತ್ತಿದ್ದಾರೆ. ಮಾಫಿ ಸಾಕ್ಷಿ ಹೇಳಿಕೆ ದಾಖಲು ಒಂದು ವಾರ ಮುಂದೂಡುವಂತೆ ಮತ್ತೊಂದು ಅರ್ಜಿ ಸಲ್ಲಿಸಿದ್ದಾರೆ.

ಪ್ರದೋಷ್ ಮಾಫಿ ಸಾಕ್ಷಿಯಾಲು ಒಪ್ಪಿಗೆ ನೀಡಿರುವ 59ನೇ ಸಿಸಿಹೆಚ್ ಕೋರ್ಟ್, ಇದೀಗ ಸಾಕ್ಷಿ ಹೇಳಿಕೆ ದಾಖಲಿಸುವ ಪ್ರಕ್ರಿಯೆಗೆ ಸೆಪ್ಟೆಂಬರ್ 28ರಂದು ದಿನಾಂಕ ನಿಗದಿ ಮಾಡಿದೆ. ಇದರಿಂದ ತೀವ್ರ ಆತಂಕಕ್ಕೆ ಒಳಗಾದ ದರ್ಶನ್, ಮಾಫಿ ಸಾಕ್ಷಿ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ನಿರ್ಧರಿಸಿದ್ದಾರೆ.

ಮಾಫಿ ಸಾಕ್ಷಿ ಆದೇಶ ಪ್ರಶ್ನಿಸಿ ಸುಪ್ರೀಂಕೋರ್ಟ್ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಕೋರಿದ್ದೇವೆ. ಹೀಗಾಗಿ ಮಾಫಿ ಸಾಕ್ಷಿ ಹೇಳಿಕೆ ದಾಖಲು ದಿನಾಂಕವನ್ನು ಒಂದು ವಾರ ಮುಂದೂಡಿಕೆ ಮಾಡುವಂತೆ ಕೋರಿ ದರ್ಶನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದಾರೆ.



## ಮೊಬೈಲ್ ಆಪ್ ಇ–ಕೆವೈಸಿ ಮಾನ್ಯವಲ್ಲ: ಆಹಾರ ಇಲಾಖೆ

**ಬೆಂಗಳೂರು:** ಕೇಂದ್ರ ಸರ್ಕಾರದ ಮೇರಾ ರೇಷನ್ ಮೊಬೈಲ್ ಆಪ್ ಮೂಲಕ ರೇಷನ್ ಕಾರ್ಡ್ ಇ–ಕೆವೈಸಿ ಮಾಡಿದರೆ ಕರ್ನಾಟಕ ರಾಜ್ಯದಲ್ಲಿ ಅಧಿಕೃತವಾಗಿ ಮಾನ್ಯವಾಗುವುದಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಮಹತ್ವದ ಎಚ್ಚರಿಕೆ ನೀಡಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ಮಾಹಿತಿಯನ್ನು ನಂಬಿ ಸಾರ್ವಜನಿಕರು ಗೊಂದಲಕ್ಕೀಡಾಗಬಾರದು ಎಂದು ಆಹಾರ ಇಲಾಖೆ ಸ್ಪಷ್ಟಪಡಿಸಿದ್ದಾರೆ.

ಪಡಿತರ ಚೀಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ಸದಸ್ಯರೂ ಕಡ್ಡಾಯವಾಗಿ ತಮ್ಮ ನ್ಯಾಯಬೆಲೆ ಅಂಗಡಿಗೆ ತೆರಳಿ ಬಯೋಮೆಟ್ರಿಕ್ ನೀಡಿ ಇ–ಕೆವೈಸಿ ಪೂರ್ಣಗೊಳಿಸಬೇಕು ಎಂದು ತಿಳಿಸಿದೆ. ಸರ್ವರ್ ಸಮಸ್ಯೆ ಹಿನ್ನೆಲೆಯಲ್ಲಿ ಆಹಾರ ಇಲಾಖೆಯು ಇ–ಕೆವೈಸಿ ಮಾಡಿಸಲು ಕೊನೆಯ ದಿನಾಂಕವನ್ನು ಅಕ್ಟೋಬರ್ 20 ರವರೆಗೆ ವಿಸ್ತರಿಸಿದೆ.



## ಇ.ಡಿ ಕಸ್ಟಡಿಗೆ ಗ್ಯಾನೇಂದ್ರ

**ಬೆಂಗಳೂರು:** ಕೆಪಿಎಸ್‌ಸಿ ಪಶುವೈದ್ಯಾಧಿಕಾರಿ ನೇಮಕಾತಿ ಅಕ್ರಮ ಪ್ರಕರಣದ ಆರೋಪಿ, ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಅವರನ್ನು 8 ದಿನ ಇ.ಡಿ ಕಸ್ಟಡಿಗೆ ನೀಡಲಾಗಿದೆ.

ಕಸ್ಟಡಿ ಅಂತ್ಯ ಹಿನ್ನೆಲೆ ಸಿಬಿಐ ವಿಶೇಷ ನ್ಯಾಯಾಲಯದ ಮುಂದೆ ಆರೋಪಿ ಗ್ಯಾನೇಂದ್ರರನ್ನು ಹಾಜರುಪಡಿಸಲಾಯಿತು. ಮತ್ತೆ 8 ದಿನ ಇ.ಡಿ ಕಸ್ಟಡಿಗೆ ವಹಿಸಿ ಕೋರ್ಟ್ ಆದೇಶಿಸಿದೆ.

ಆರೋಪಿ ಗ್ಯಾನೇಂದ್ರ ಪರ ವಕೀಲರು, ಗ್ಯಾನೇಂದ್ರ ಕುಮಾರ್ ಅವರಿಗೆ ಬೆನ್ನು ನೋವಿನ ಸಮಸ್ಯೆ ಇದೆ. ಫಿಸಿಯೋಥೆರಪಿ ಅವಶ್ಯಕತೆ ಇದೆ. ವಿಚಾರಣೆ ಹೆಸರಿಗೆ ಅವರಿಗೆ ತೊಂದರೆ ನೀಡಲಾಗುತ್ತಿದೆ ಎಂದು ವಾದಿಸಿದರು.

ಇ.ಡಿ ಪರ ವಾದಿಸಿದ ವಕೀಲರು, 2026ರ ಜನವರಿ 9ರಂದು ಪರೀಕ್ಷೆ ನಡೆದಿದೆ. ಪರೀಕ್ಷೆಗೂ 6 ತಿಂಗಳು ಮೊದಲಿನಿಂದಲೂ ಹಣ ಸಂಗ್ರಹಿಸಲಾಗಿದೆ.



ಬಸವರಾಜ್ ಕನ್ನಾಳೆ ಜೊತೆಗೆ ಚಿನ್ನಾಭರಣ ಖರೀದಿಗೆ ಹಣದ ವ್ಯವಹಾರ ಪ್ರಸ್ತಾಪವಾಗಿತ್ತು. ಗ್ಯಾನೇಂದ್ರ ಸೋದರ ಸಂಬಂಧಿ ಬ್ಯಾಂಕ್ ಅಕೌಂಟ್ ಮೂಲಕ ಹಣ ವರ್ಗಾವಣೆ ಆಗಿದೆ ಎಂದು ಅಪಾರ ಪ್ರಮಾಣದ ಅಕ್ರಮ ಹಣಕಾಸು ವರ್ಗಾವಣೆ ಬಗ್ಗೆ ಕೋರ್ಟ್ ಗಮನ ಸೆಳೆದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಆರೋಪಿ ಗ್ಯಾನೇಂದ್ರರನ್ನು ಸೆ.26 ರಿಂದ ಅ.3ರ ವರೆಗೆ 8 ದಿನಗಳ ಕಸ್ಟಡಿಗೆ ನೀಡಿದರು.

## ಜ್ಞಾನೇಶ್ ವಜಾಕ್ಕೆ ಸಿದ್ದು ಆಗ್ರಹ

**ಬೆಂಗಳೂರು:** ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು. ರಾಷ್ಟ್ರಪತಿ ದ್ರೌಪದಿ ಮುರ್ಮು ಮಧ್ಯಪ್ರವೇಶಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಫ್ರೀಡಂ ಪಾರ್ಕ್‌ನಲ್ಲಿ ಶನಿವಾರ ನಡೆದ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಭಾರತೀಯ ಚುನಾವಣಾ ಆಯೋಗದ ಕಾರ್ಯವೈಖರಿ ಮತ್ತು ಸ್ವಾಯತ್ತತೆ ಕುರಿತು ಗಂಭೀರ ಕಳವಳ ವ್ಯಕ್ತಪಡಿಸಿದರು.

ಚುನಾವಣಾ ಆಯೋಗ ಸ್ವತಂತ್ರವಾಗಿ, ನಿಷ್ಪಕ್ಷಪಾತವಾಗಿ ಮತ್ತು ಪಾರದರ್ಶಕವಾಗಿ ಚುನಾವಣೆಗಳನ್ನು ನಡೆಸುವ ಸಾಂವಿಧಾನಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕಿದೆ. ಆದರೆ ಅದು ಕೇಂದ್ರ ಸರ್ಕಾರದ ಇಚ್ಛೆಯಂತೆ ಕಾರ್ಯನಿರ್ವಹಿಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಚುನಾವಣಾ ಆಯೋಗದ ಸದಸ್ಯರು ಸಾಂವಿಧಾನಿಕ ನಿಬಂಧನೆಗಳಿಗೆ ವಿರುದ್ಧವಾಗಿ ವರ್ತಿಸಿರುವುದು ಕಂಡು




ಬಂದರೆ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಬೇಕು. ನಿಯಮ ಉಲ್ಲಂಘನೆ ಸಾಬೀತಾದರೆ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಅವರು ಆಗ್ರಹಿಸಿದರು.

ಕಳೆದ 10 ತಿಂಗಳಲ್ಲಿ ಚುನಾವಣಾ ಆಯೋಗದ ಹಲವು ನಿರ್ಧಾರಗಳ ಬಗ್ಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ಪುಟ 2ಕ್ಕೆ

## ಸರ್ಕಾರದ ವಿರುದ್ಧವೇ ಬಿ.ಆರ್.ಪಾಟೀಲ್ ಕಿಡಿ

**ಬೆಂಗಳೂರು:** ಕಾಂಗ್ರೆಸ್ ಹಿರಿಯ ಶಾಸಕ ಬಿ.ಆರ್ ಪಾಟೀಲ್ ತಮ್ಮದೇ ಸರ್ಕಾರದ ವಿರುದ್ಧ ಮತ್ತೊಮ್ಮೆ ಕಿಡಿಕಾರಿದ್ದಾರೆ.

ಕಾಂಗ್ರೆಸ್ ಪಕ್ಷ ಪ್ರಣಾಳಿಕೆ ಭರವಸೆಗಳನ್ನು ಈಡೇರಿಸದೆ ಮರೆತಿದೆ ಎಂದು ಅವರು ಆರೋಪಿಸಿದ್ದಾರೆ. ವಿಶೇಷವಾಗಿ ಭೂಸುಧಾರಣಾ ಕಾಯ್ದೆಗಳಿಗೆ ತಿದ್ದುಪಡಿ ತರುವ ವಿಷಯದಲ್ಲಿ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿಲ್ಲ ಎಂದು ಅವರು ದೂರಿದರು.

ಬಜೆಟ್ ಮಂಡನೆಗೂ ಮುನ್ನ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದಾಗ, ಈ ತಿದ್ದುಪಡಿಗಳನ್ನು ಬಜೆಟ್‌ನಲ್ಲಿ ಸೇರಿಸಲು ಒಪ್ಪಿಗೆ ನೀಡಲಾಗಿತ್ತು. ಆದರೆ, ಮಂಡನೆಯಾದ ಬಜೆಟ್ ಪ್ರತಿಯಲ್ಲಿ ಈ ಪ್ರಸ್ತಾಪ ಮಾಯವಾಗಿತ್ತು ಎಂದು ಪಾಟೀಲ್ ಟೀಕಿಸಿದರು.



# ಆಯೋಗ ಮತಗಳ್ಳತನದ ಪಾಲುದಾರ

## ಕೇಂದ್ರ ಚುನಾವಣಾ ಆಯೋಗದ ವಿರುದ್ಧ ಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ

**ಬೆಂಗಳೂರು:** ಕೇಂದ್ರ ಚುನಾವಣಾ ಆಯೋಗ ಬಿಜೆಪಿ ಜೊತೆ ಸೇರಿ ಮತಗಳ್ಳತನದ ಪಾಲುದಾರ ಆಗಿದೆ. ಆಡಳಿತ ವ್ಯವಸ್ಥೆ ಟೀಕಿಸುವ ಮತದಾರರನ್ನು ಗುರಿ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಕೆಪಿಸಿಸಿ ವತಿಯಿಂದ ಸ್ವಾತಂತ್ರ್ಯ



ಉದ್ಯಾನದಲ್ಲಿ ಶನಿವಾರ ನಡೆದ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು. ಜ್ಞಾನೇಶ್ ಕುಮಾರ್ ಪ್ರತಿಕೃತಿ ದಹಿಸಿ ಪ್ರತಿಭಟನೆ ನಡೆಸಲಾಯಿತು.

ಸಂವಿಧಾನದ ಮೂಲಕ ಈ ದೇಶದ ಚುನಾವಣಾ ಆಯೋಗಕ್ಕೆ ಸ್ವಾಯತ್ತತೆ ನೀಡಲಾಗಿತ್ತು. ಅದನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಪುಟ 2ಕ್ಕೆ

### ಆಯೋಗ ದುರ್ಬಳಕೆ: ಬಿಕೆಎಚ್

ಯಾವುದೇ ಚುನಾವಣೆ ಗೆದ್ದ ನಂತರ ಮೋದಿ ಬಿರುಗಾಳಿ, ಅಮಿತ್ ಶಾ ಚಾಣಕ್ಯತನ ಕಾರಣ ಎಂದು ಹೇಳುತ್ತಿದ್ದರು. ಯಾವ ಬಿರುಗಾಳಿಯೂ ಇಲ್ಲ, ಚಾಣಕ್ಯತನವೂ ಇಲ್ಲ. ಚುನಾವಣಾ ಆಯೋಗವನ್ನು ಬಳಸಿಕೊಂಡು ಮತಗಳ್ಳತನ ಮಾಡಲಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಆರೋಪಿಸಿದರು. ಪುಟ 2ಕ್ಕೆ

### ಬಲಿಷ್ಠ ಚುನಾವಣಾ ವ್ಯವಸ್ಥೆಗೆ ಹೋರಾಟ

ನವೆಂಬರ್, ಡಿಸೆಂಬರ್ ವೇಳೆಗೆ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುತ್ತೇವೆ. ಇದಕ್ಕೆ ಮತ ಪತ್ರ ಬಳಸಲು ತೀರ್ಮಾನಿಸಿದ್ದೇವೆ. ಬಲಿಷ್ಠ ಚುನಾವಣಾ ವ್ಯವಸ್ಥೆಗೆ ನಾವು ಹೋರಾಟ ಮಾಡುತ್ತಿದ್ದೇವೆ. ಪ್ರತಿ ಹಳ್ಳಿಗೂ ಎಸ್‌ಐಆರ್ ವಿರೋಧಿ ಹೋರಾಟ ತಲುಪಿಸಲಾಗುವುದು ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಬೆಂಗಳೂರು ಕೇಂದ್ರ ಲೋಕಸಭಾ ಸ್ಥಾನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮನ್ಸೂರ್ ಖಾನ್ ಅವರು 31 ಸಾವಿರ ಮತಗಳ ಅಂತರದಿಂದ ಚುನಾವಣಾ ಆಯೋಗದ ಪ್ರಕಾರ ಸೋತಿದ್ದರು. ಈಗ ಎಸ್‌ಐಆರ್‌ನಿಂದ 12 ಲಕ್ಷ ಮತಗಳು ಪುಟ 2ಕ್ಕೆ

## ಡಿಜೆಗೆ ವಿದ್ಯುತ್ ಸ್ಪರ್ಶ: ಇಬ್ಬರ ಸ್ಥಿತಿ ಗಂಭೀರ

**ಕೊಡಗು:** ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಶುಕ್ರವಾರ ತಡರಾತ್ರಿ ನಡೆದ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ, ಡಿಜೆ ವಾಹನಕ್ಕೆ ವಿದ್ಯುತ್ ತಂತಿ ತಗುಲಿ ಐವರು ಗಾಯಗೊಂಡಿದ್ದಾರೆ. ಗಾಯಾಳುಗಳ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ಪುಟ 2ಕ್ಕೆ



# ಪೊಲೀಸರ ವರ್ತನೆ ವಿರುದ್ಧ ಹೆಚ್‌ಡಿಕೆ ಕಿಡಿ

## ದಬ್ಬಾಳಿಕೆ ನಡೆಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಎರಡು ದಿನಗಳ ಗಡುವು

## ಪೊಲೀಸರ ವಶದಲ್ಲಿದ್ದ ಪ್ರತಿಭಟನಾಕಾರರನ್ನು ಭೇಟಿ ಮಾಡಿದ ಕೇಂದ್ರ ಸಚಿವ ಎಚ್.ಡಿ.ಕೆ

## ಉಪವಾಸ ಕೈಬಿಟ್ಟ ಪ್ರತಿಭಟನಾಕಾರರು

ರಾಮನಗರ: ಬಿಡದಿ ಸಮಗ್ರ ನಗರ ಯೋಜನೆಯ ಭೂಸ್ವಾಧೀನವನ್ನು ವಿರೋಧಿಸಿ ಬಿಡದಿ ಹೋಬಳಿ ಬೈರಮಂಗಲದಲ್ಲಿ ನಡೆಯುತ್ತಿದ್ದ ರಸ್ತೆ ತಡೆ ಮತ್ತು ಉಪವಾಸ ಸತ್ಯಾಗ್ರಹದ ವೇಳೆ ಶುಕ್ರವಾರ ಸಂಜೆ ಪೊಲೀಸರು ಬಲವಂತವಾಗಿ ಅಲ್ಲಿಂದ ಎತ್ತಂಗಡಿ ಮಾಡಿ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದುಕೊಂಡಿದ್ದನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತೀವ್ರವಾಗಿ ಖಂಡಿಸಿದ್ದಾರೆ.

**ರೈತರ ಉಪವಾಸ ಸತ್ಯಗ್ರಹ ಅಂತ್ಯ**

ಚನ್ನಪಟ್ಟಣದ ಪೊಲೀಸ್ ಭವನದಲ್ಲಿ ಪೊಲೀಸರ ವಶದಲ್ಲಿದ್ದ ರೈತರು ಮತ್ತು ರೈತ ಮಹಿಳೆಯರನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿ ಮಾಡಿ ಧೈರ್ಯ ತುಂಬಿದರು. ಶಾಂತಿಯುತ ಹೋರಾಟಕ್ಕೆ ತಮ್ಮ ಬೆಂಬಲ ಸದಾ ಇದೆ ಎಂದು ಘೋಷಿಸಿದರು. ಶುಕ್ರವಾರ ಸಂಜೆ ಅವರ ಮೇಲೆ ನಡೆದ ಪೊಲೀಸ್ ದೌರ್ಜನ್ಯವನ್ನು ಖಂಡಿಸಿದರು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಐಜಿಪಿ ಅವರಿಗೆ ಕರೆ ಮಾಡಿ ಎರಡು ದಿನಗಳ ಗಡುವು ಕೊಟ್ಟರು.

ಪೊಲೀಸರ ವಶದಲ್ಲಿದ್ದ ವೇಳೆಯೂ ರೈತರು ಮತ್ತು ರೈತ ಮಹಿಳೆಯರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದ್ದರು. ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರತಿಭಟನಾಕಾರರ ಮನವೊಲಿಸಿ ಹಣ್ಣುಗಳನ್ನು ಸೇವಿಸಲು ಕೊಟ್ಟರು. ಹಣ್ಣು ಸೇವಿಸಿದ ಪ್ರತಿಭಟನಾಕಾರರು ತಮ್ಮ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಿದರು.

**ಪೊಲೀಸರ ಅನಾಗರೀಕ ವರ್ತನೆ**

ತದ ನಂತರ ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿದ ಅವರು ತಮ್ಮ ಭೂಮಿ ಉಳಿಸಿಕೊಳ್ಳಲು ರೈತ ಕುಟುಂಬಗಳು ನಿರಂತರವಾಗಿ ಶಾಂತಿಯುತ ಪ್ರತಿಭಟನೆ ನಡೆಸಿಕೊಂಡು ಬರುತ್ತಿದ್ದಾರೆ. ಬೈರಮಂಗಲದಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ರೈತರು ಮತ್ತು ರೈತ ಮಹಿಳೆಯರ ಮೇಲೆ ಪೊಲೀಸರು ದೌರ್ಜನ ನಡೆದಿದೆ. ಪ್ರತಿಭಟನಾಕಾರರ ಪೈಕಿ ಕೆಲವರ ಬಟ್ಟೆಗಳು ಹರಿದು ಹೋಗಿವೆ. ಕೆಲವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಸರ್ಕಾರ ಅನಾಗರೀಕವಾಗಿ ಪ್ರತಿಭಟನಾಕಾರರನ್ನು ನಡೆಸಿಕೊಂಡಿದೆ ಎಂದು ರಾಜ್ಯ ಸರ್ಕಾರ ಮತ್ತು ಪೊಲೀಸರ ವಿರುದ್ಧ ಹರಿಹಾಯ್ದರು.

**ಸಿಎಂ ಅವರು ಎಂತಹ ಬದುಕು ಕೊಡ್ತಿದ್ದಾರೆ**

ಹೋರಾಟಗಾರರ ಪರ ಬೆಂಬಲಕ್ಕೆ ತಾವು ನಿಂತಿರುವುದು ಪ್ರತಿಷ್ಠೆಗೆ ಅಲ್ಲ. ಪಕ್ಷದ ವಿಚಾರಕ್ಕೂ ಅಲ್ಲ ಎಂದು ಸ್ಪಷ್ಟಪಡಿಸಿದ ಕುಮಾರಸ್ವಾಮಿ ಅವರು, ಮುಖ್ಯಮಂತ್ರಿಗಳು ಪದೇ ಪದೇ ಹೇಳಿದ್ದಾರೆ. ಅವರು ಬದುಕಿಗಾಗಿ ಹೋರಾಟ ಮಾಡ್ತಾರಂತೆ, ಬೇರೆಯವರು ಭಾವನೆಗಳ ಮೇಲೆ ಹೋರಾಟ ಮಾಡ್ತಾರೆ ಅಂತ. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ದಬ್ಬಾಳಿಕೆ ನಡೆಸಿದ್ದ ಇಂತಹ ಬದುಕು ಕೊಡಲಿಕ್ಕಾ ಎಂದು ಪ್ರಶ್ನಿಸಿದರು.

ಸಿಎಂ ಅವರು ಯಾವ್ಯಾವ ಸಂದರ್ಭದಲ್ಲಿ ಏನೇನು ಮಾಡಿಕೊಂಡು ಇಷ್ಟು ದೊಡ್ಡ ಮಟ್ಟದ ಬದುಕನ್ನು ಕಟ್ಟಿಕೊಂಡಿದ್ದಾರೆ ಅಂತ ಗೊತ್ತಿದೆ ಎಂದು ವಾಗ್ದಾಳಿ ನಡೆಸಿದರು. ಹೇಳಿಕೆ ಕೊಟ್ಟರೆ ಸಾಲೋಲ್ಲ. ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕು ಎಂದ ಕೇಂದ್ರ ಸಚಿವರು ಚನ್ನಪಟ್ಟಣದ ವಿಠಲೇನಹಳ್ಳಿ ಗೋಲಿಬಾರ್ ನೆನಪಿಸಿಕೊಂಡರು. ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಹಾಲಿ ಮುಖ್ಯಮಂತ್ರಿಗಳು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ವಿಠಲೇನಹಳ್ಳಿಯಲ್ಲಿ ರೈತರ ಮೇಲೆ ಗೋಲಿಬಾರ್ ನಡೆದು ಇಬ್ಬರು ಮೃತಪಟ್ಟಿದ್ದರು. ತದ ನಂತರ ರಾಜ್ಯದಲ್ಲಿ 136 ಕ್ಷೇತ್ರಗಳಲ್ಲಿ ಗೆದ್ದಿದ್ದ ಕಾಂಗ್ರೆಸ್ 62 ಕ್ಷೇತ್ರಗಳಿಗೆ ಸೀಮಿತವಾಯಿತು ಎಂದು ಕಾಂಗ್ರೆಸ್ ಪಕ್ಷದ ಭವಿಷ್ಯದ ಬಗ್ಗೆ ಎಚ್ಚರಿಕೆ ನೀಡಿದರು.

ಯೋಜನೆಯ ಬಗ್ಗೆ ಮುಖ್ಯಮಂತ್ರಿಗಳಿಗೇಕೆ ಇಷ್ಟು ಹಠ ಎಂದು ಪ್ರಶ್ನಿಸಿದ ಕುಮರಸ್ವಾಮಿ ನೈಸ್ ಯೋಜನೆ ವಿಚಾರದಲ್ಲಿಯೂ ಡಿಕೆಶಿ ವಿರುದ್ಧ ಪ್ರರೋಕ್ಷವಾಗಿ ವಾಗ್ದಾಳಿ ನಡೆಸಿದರು. ಅಂದು ಸಹ ನೈಸ್ ಯೋಜನೆಗಾಗಿ ಭೂಮಿಯನ್ನು ಮಾರಿಕೊಂಡಿದ್ದಾರೆ. ಸಮಗ್ರ ನಗರ ಯೋಜನೆ ವಿಚಾರದಲ್ಲಿ ಯಾರಿಗೋ ಭೂಮಿ ಮಾರಲು ಹೊರಟಿದ್ದಾರೆ ಎಂದರು.

ಈ ವೇಳೆ ಪ್ರಮುಖರಾದ ನಿಖಿಲ್ ಕುಮಾರಸ್ವಾಮಿ ಮಾಜಿ ಶಾಸಕ ಎ.ಮಂಜುನಾಥ್ ಮತ್ತು ರಾಜ್ಯ ಮಟ್ಟದ ಜೆಡಿಎಸ್ ನಾಯಕರು ಹಾಜರಿದ್ದರು.



### ಗೃಹಸಚಿವರ ವಿರುದ್ಧ ಟೀಕೆ

ರಾಜ್ಯದ ಗೃಹಸಚಿವರು ಎಲ್ಲರಿಗು ಉಪದೇಶ ಮಾಡ್ತಾರೆ. ಬೈರಮಂಗಲದಲ್ಲಿ ಶುಕ್ರವಾರ ಸಂಜೆ ನಡೆದ ಘಟನೆ ವಿಚಾರದಲ್ಲಿ ಏನು ಕ್ರಮ ಕೈಗೊಂಡಿದ್ದಾರೆ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿಗಳು ಬೈರಮಂಗಲದಲ್ಲಿ ಕೆಲವು ಕಾಂಗ್ರೆಸ್ ಪುಡಾರಿಗಳು, ಏಜೆಂಟರುರನ್ನು ನೇಮಿಸಿಕೊಂಡಿದ್ದಾರೆ. ಇವರು ಭೂಸ್ವಾಧೀನಕ್ಕೆ ಇಷ್ಟದ ಕುಟುಂಗಳನ್ನು ಅಶ್ಲೀಲ ಪದಗಳನ್ನು ಬಳಸಿ ಮಾನ ಸಿಕವಾಗಿ ಕುಗ್ಗಿಸುತ್ತಿದ್ದಾರೆ. ವಿಶೇಷವಾಗಿ ಹೆಣ್ಣು ಮಕ್ಕ ಳನ್ನು ಹೀಗೆ ನಡೆಸಿಕೊಳ್ಳಲಾಗುತ್ತಿದೆ. ಇಂತಹವರಿಗೆ ಪೊಲೀಸರು ಬೆಂಬಲ ನೀಡುತ್ತಿದ್ದಾರೆ ಎಂದು ಹರಿಹಾಯ್ದರು.

### ಹೆಚ್.ಡಿ.ದೇವೇಗೌಡರನ್ನು ಕರೆ ತರಲು ಪ್ರಯತ್ನಿಸುವೆ

ಈಗಾಗಲೆ ಭೂಸ್ವಾಧೀನಕ್ಕೆ ಇಷ್ಟಿಗೆ ನೀಡಿರುವ ರೈತರಿಗೆ ಜಿಬಿಐಡಿ ಪರಿಹಾರದ ಹಣ ಕೊಡ್ತಿದ್ದಾರೆ ಎಂದು ಮಾಧ್ಯಮ ಪ್ರತಿನಿಧಿಗಳು ಗಮನ ಸೆಲೆದಾಗ ಎಷ್ಟು ಮಂದಿಗೆ ಕೊಟ್ಟಿದ್ದಾರೆ. ಅಲ್ಲಿ ಎಷ್ಟು ರೈತ ಕುಟುಂಬಗಳಿವೆ. ಇದು ನನ್ನ ಪ್ರಶ್ನೆ. ದಬ್ಬಾಳಿಕೆ ಮಾಡಿ, ರಾತ್ರೋ ರಾತ್ರಿ ರೌಡಿಗಳನ್ನು ಕಳಹುಸಿ ಭೂಮಿಯನ್ನು ಬರಸಿಕೊಳ್ಳಲು ಯತ್ನಿಸಿದ್ದಾರೆ. ಇವರ ದಬ್ಬಾಳಿಕೆ ನಡುವೆ, ಇಷ್ಟು ಮಂದಿ ರೈತರು ಇಲ್ಲೇಕೆ ಕುಳಿತಿದ್ದಾರೆ. ಇವರು ರೈತರಲ್ಲವೇ. ಗುಂಡಾಗಳನ್ನು ಇಷ್ಟು ಕೊಂಡು ರಾಜಕೀಯ ಮಾಡ್ತಿದ್ದಾಋಎ. ಈ ವಿಚಾರವನ್ನು ಚರ್ಚೆ ಮಡುವ ನಯತಿಕತೆ ಇದೆಯ ಇವರಿಗೆ ಎಂದರು. ರೈತರ ಬೂಮಿಯ ಉಳಿಯುವವರೆಗು ಹೋರಾಟ ಮುಂದುವರೆಯುತ್ತದೆ. ದೇವೇಗೌಡರು ಬೈರಮಂಗಲಕ್ಕೆ ಬರಬೇಕು ಅಂತ ಜನರ ಬಯಕೆ. ಸಾಧ್ಯವಾದರೆ ನಾಳೆಯೇ (ಭಾನುವಾರ) ಕಳುಹಿಸುವೆ ಎಂದರು.

### 2028ರೊಳಗೆ ಈ ಸರ್ಕಾರ ನೆಗೆದು ಬಿದ್ದಿರುತ್ತೆ!

ಈಗಲೂ ಈ ಸರ್ಕಾರ ಹಿಂದೆ ನಡೆದುಕೊಂಡಂತೆ ನಡೆದುಕೊಳ್ಳುತ್ತಿದೆ. 2028ರ ಚುನಾವಣೆಗೂ ಮುನ್ನ ಇವರು ಅಧಿಕಾರದಲ್ಲಿ ಇರ್ತಾರೋ ಇಲ್ಲವೋ ಗೊತ್ತಿಲ್ಲ ಎಂದರು. ಬಿಡದಿ ಯೋಜನೆಯನ್ನು ಮಾಡೇ ಮಾಡ್ತೀವಿ ಅಂತ ರಾಜ್ಯ ಸರ್ಕಾರ ಹೇಳುತ್ತಿದೆ ಎಂದು ಮಾಧ್ಯಮ ಪ್ರತಿನಿಧಿಗಳು ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಕುಮಾರಸ್ವಾಮಿ ಅಷ್ಟರೊಳಗೆ ಈ ಸರ್ಕರ ನೆಗೆದು ಬಿದ್ದಿರುತ್ತೆ. 2028ರವರೆಗೆ ಇವರು ಇರ್ತಾರ? ಅವರು ಕೊನೆ ಹಂತಕ್ಕೆ ಬಂದಿದ್ದಾರೆ. ಭಗವಂತ ಎಲ್ಲ ನೋಡುತಿದ್ದಾನೆ. ದೀಪ ಆರುವ ಮುನ್ನ ಪ್ರಕಾಶಮಾನವಾಗಿ ಬೆಳಗಿ ಠುಸ್ ಅನ್ನುತ್ತೆ. ಅದನ್ನು ಈ ವ್ಯಕ್ತಿಯ ಜೀವನದಲ್ಲಿ ಕಾಣ್ತೀರ ಎಂದರು.

### ಎಕರೆಗೆ 25–30 ಕೋಟಿ ಕೊಡ್ತಾರಾ?

ಬಿಡದಿ ಸಮಗ್ರ ನಗರ ಯೋಜನೆ ವಿಚಾರದಲ್ಲಿ ರಾಜ್ಯ ಸರ್ಕಾರ ಸಾಧಕ–ಬಾಧಕಗಳನ್ನು ಅರಿಯಲು ಸಮಿತಿ ಮಾಡಿದೆ ಎಂದು ಮಾಧ್ಯಮ ಪ್ರತಿನಿಧಿಗಳು ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಅವರು, ಸಮಿತಿಯಲ್ಲಿ ಯಾರ‍್ಯಾರಿದ್ದಾರೆ. ಅವರಿಗೆ ರೈತರಕಷ್ಟ ಗೊತ್ತಿದೆಯೇ ಎಂದು ಪ್ರಶ್ನಿಸಿದರು. ಸಮಿತಿಯ ಅಧ್ಯಕ್ಷರು ಹಿಂದೆ ಹೈಕೋರ್ಟಿನಲ್ಲಿ ನ್ಯಾಯಮೂರ್ತಿಗಳಾಗಿದ್ದರು. ಇಂದು ಸಮಗ್ರ ನಗರ ಯೋಜನೆಗೆ ನೋಟಿಫೈ ಆಗಿರುವ ಭೂಮಿಯ ಪಕ್ಕದಲ್ಲೇ ಈಗಲ್‌ಟನ್ ಇದೆ. ಈಗಲ್‌ಟನ್ ವಿರುದ್ಧ ಭೂಕಬಳಿಕೆ ದೂರು ಇತ್ತು. ಇದೇ ನ್ಯಾಯಮೂರ್ತಿಗಳ ಮುಂದೆ ಈ ವಿಚಾರ ಇತ್ತು. ಅಂದು ಈಗಲ್‌ಟನ್‌ಗೆ ಎಕರೆಗೆ 12.5 ಕೋಟಿ ರೂ ಕೊಡುವಂತೆ ತೀರ್ಪು ನೀಡಿದ್ದರು. 10 ವರ್ಷಗಳ ಹಿಂದೆ ಎಕರೆಗೆ 12.5 ಕೋಟಿ ನಿರ್ಧಾರವಾಗಿದೆ. ಅಂದರೆ ಈಗ ಎಕರೆಗೆ ಎಷ್ಟು ಬೆಲೆ ಫಿಕ್ಸ್ ಮಾಡ್ತಾರೆ ನೋಡಬೇಕು ಎಂದರು. ಅಂದಿನ ಬೆಲೆಯನ್ನು ಪರಿಗಣಿಸಿದರೆ ಇಂದು ಎಕರೆಗೆ 25 ರಿಂದ 30 ಕೋಟಿ ರೂ ಕೊಡ್ತಾರಾ ಎಂದರು.

## ಮೊದಲ ಪುಟದಿಂದ

### ಕೆಪಿಎಸ್ಸಿ ಅಕ್ರಮ: ಕಾಕ್ರೋಚ್ ಮೌನ

ಕೆಪಿಎಸ್ಸಿ ಅಕ್ರಮಗಳ ತನಿಖೆ ನಡೆಸಲು ರಾಜ ಹೈಕೋರ್ಟ್ ಎಸ್‌ಐಟಿ ರಚಿಸಿ ಅಧಿಕಾರಿಗಳನ್ನು ನೇಮಕ ಮಾಡಿದೆ. ಆದರೆ ಆ ಅಧಿಕಾರಿಗಳು ಬೇಡವೆಂದು ಈ ಸರ್ಕಾರ ನಾಟಕ ಆಡುತ್ತಿದೆ. ಒಬ್ಬ ಅಧಿಕಾರಿಯನ್ನು ವರ್ಗಾವಣೆಯನ್ನು ಮಾಡಿದೆ. ಹೆಬ್ಬೆಟ್ಟು ಒತ್ತುವ ಅಧಿಕಾರಿಗಳು ಇವರಿಗೆ ಬೇಕಾಗಿದೆ. ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳು ಇವರಿಗೆ ಆಗಿ ಬರುವುದಿಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

### ಬ್ಯಾಂಕ್ ಮ್ಯಾನೇಜರ್‌ಗೆ 1 ವರ್ಷ ಶಿಕ್ಷೆ

ಪ್ರಕರಣ ದಾಖಲಾಗಿತ್ತು. ಅಂದಿನ ಪೊಲೀಸ್ ಉಪನಿರೀಕ್ಷಕ ಪ್ರಶಾಂತ್ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

### ಇಬ್ಬರ ಸ್ಥಿತಿ ಗಂಭೀರ

ಅಲಂಕೃತ ಮಂಟಪಗಳ ಮೆರವಣಿಗೆ ಸಾಗುತ್ತಿದ್ದ ಸಂದರ್ಭದಲ್ಲಿ ಡಿಜೆ ವಾಹನದ ಮೇಲಿದ್ದ ಐವರಿಗೆ ವಿದ್ಯುತ್ ತಂತಿ ತಗುಲಿದೆ. ಧಾರವಾಡ ಮೂಲದ ಬಸವರಾಜು ಹಾಗೂ ಮತ್ತೊಬ್ಬನ ಸ್ಥಿತಿ ಗಂಭೀರವಾಗಿದೆ. ಇಬ್ಬರನ್ನೂ ಮೈಸೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಮೂವರು ಗಾಯಾಳುಗಳನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

### ಮತಗಳ್ಳತನದ ಪಾಲುದಾರ

ರಾಷ್ಟ್ರಪತಿ ಮಧ್ಯಪ್ರವೇಶಿಸಿ ಚುನಾವಣಾ ಆಯೋಗ ವಿಸರ್ಜಿಸಬೇಕು. ಮುಖ್ಯ ಆಯುಕ್ತರನ್ನು ಬಂಧಿಸಬೇಕು. ಅಕ್ರಮವಾಗಿ ನಡೆದ ಚುನಾವಣೆಗಳನ್ನು ರದ್ದು ಮಾಡಬೇಕು ಎಂದು ಸಿಎಂ ಶಿವಕುಮಾರ್ ಆರೋಪಿಸಿದರು.

ಜ್ಞಾನೇಶ್ ಕುಮಾರ್ ಅವರು ಚೀಫ್ ಎಲೆಕ್ಷನ್ ಕಮಿಷನರ್ ಅಲ್ಲ, ಚೀಫ್ ಸೆಲೆಕ್ಷನ್ ಕಮಿಷನರ್ ಆಗಿದ್ದೀರಿ. ಜನ ಅವರ ಅನ್ಯಾಯಗಳ ವಿರುದ್ಧ ದಂಗೆ ಏಳುತ್ತಾರೆ. ಕೇಂದ್ರ ಸರ್ಕಾರ ಅಧಿವೇಶನ ಕರೆದು ಈ ಬಗ್ಗೆ ಶೀಘ್ರ ಚರ್ಚೆ ನಡೆಸಬೇಕು. ಈಗ ನಡೆದಿರುವ ಎಸ್‌ಐಆರ್ ರದ್ದುಗೊಳ್ಳಬೇಕು. ಹೊಸದಾಗಿ ಮರುಪರಿಶೀಲನೆ ನಡೆಯಬೇಕು ಎಂದು ಆಗ್ರಹಿಸಿದರು.

ಕರ್ನಾಟಕದ ಜನಸಂಖ್ಯೆ 7 ಕೋಟಿ. ಇದರಲ್ಲಿ 5.54 ಕೋಟಿ ಮತದಾರರು ಇದ್ದಾರೆ. ಇದನ್ನು ಎಸ್‌ಐಆರ್ ನಡೆಸಿ 4.46 ಕೋಟಿಗೆ ಇಳಿಕೆ ಮಾಡಲಾಗಿದೆ. 30–40 ಲಕ್ಷ ಮತದಾರರಿಗೆ ನೋಟಿಸ್ ನೀಡಲಾಗಿದೆ. ಈ ತೀರ್ಮಾನವನ್ನು ನಾವು ಕಾಯುತ್ತೇವೆ. ಮತದಾನದ ಹಕ್ಕು ಪ್ರತಿಯೊಬ್ಬ ವ್ಯಕ್ತಿಯ ಹಕ್ಕು. ಇದು ಕಳೆದು ಹೋಗಲು ನಾವು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

### ಯಾವ ಪುರುಷಾರ್ಥಕ್ಕೆ ಪ್ರತಿಭಟನೆ

ಕಾಂಗ್ರೆಸ್ ಪಕ್ಷವು ನಿರಂತರವಾಗಿ ರಾಷ್ಟ್ರದ ಸಾಂವಿಧಾನಿಕ ಸಂಸ್ಥೆಗಳ ಮೇಲೆ ದಾಳಿ ನಡೆಸುತ್ತಲೇ ಇದೆ. ಅವುಗಳ ಚಾರಿತ್ರ್ಯ ವಧೆ ಮಾಡುವುದಲ್ಲದೆ ತನ್ನ ವೈಫಲ್ಯಗಳನ್ನು ಆ ಸಂಸ್ಥೆಗಳ ಮೇಲೆ ಹೇರುವ ಪ್ರಯತ್ನ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

### ಬಲಿಷ್ಠ ವ್ಯವಸ್ಥೆಗೆ ಹೋರಾಟ

ಕಡಿಮೆಯಾಗಿವೆ. ಇದಕ್ಕೆ ಬಿಜೆಪಿ ನಾಯಕರು ಉತ್ತರಿಸಲಿದ್ದಾರೆಯೇ ಎಂದು ಪ್ರಶ್ನಿಸಿದರು. ಮಹದೇವಪುರದಲ್ಲಿ 3 ಲಕ್ಷ ಮತಗಳು ಕಾಣೆಯಾಗಿವೆ. ಈಗ 12 ಲಕ್ಷ ಮತಗಳನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ. ಬಿಜೆಪಿ ದುಷ್ಕೃತ್ಯದಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ನಂಬಿಕೆ ಹೋಗುತ್ತಿದೆ ಎಂದು ಸಿಎಂ ವಿಷಾದಿಸಿದರು.

### ಆಯೋಗ ದುರ್ಬಳಕೆ: ಬಿಕೆಎಚ್

ಸಿಇಸಿ ಆಯ್ಕೆ ಸಮಿತಿಯಿಂದ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಾಧೀಶರನ್ನು ಕೈಬಿಟ್ಟು ಕೇಂದ್ರ ಮಂತ್ರಿಯನ್ನು ಸೇರಿಸುವ ಮೂಲಕ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರಲಾಗಿದೆ. ನಮ್ಮ ಹೋರಾಟ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡುವವರೆಗೂ ಮುಂದುವರಿಯಲಿದೆ ಎಂದು ಹೇಳಿದರು.

### ಜ್ಞಾನೇಶ್ ವಜಾಕ್ಕೆ ಸಿದ್ದು ಆಗ್ರಹ

ವಿವೇಕ್ ಜೋಶಿ ಅವರು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಈ ಆರೋಪಗಳು ಸಾಬೀತಾದರೆ ಮುಖ್ಯ ಚುನಾವಣಾ ಆಯುಕ್ತರು ಹುದ್ದೆಯಲ್ಲಿ ಮುಂದುವರಿಯಬಾರದು ಎಂದು ಆಗ್ರಹಿಸಿದರು. ಚುನಾವಣಾ ಆಯೋಗದ ಸ್ವಾಯತ್ತತೆಯನ್ನು ರಕ್ಷಿಸುವುದು ಹಾಗೂ ಮತ ಚಲಾಯಿಸುವ ನಾಗರಿಕರ ಸಾಂವಿಧಾನಿಕ ಹಕ್ಕನ್ನು ಕಾಪಾಡುವುದು ಈ ಪ್ರತಿಭಟನೆಯ ಉದ್ದೇಶವಾಗಿದೆ ಎಂದು ಅವರು ಹೇಳಿದರು.

# ನಾರಾಯಣ ಗುರುಗಳ ಚಿಂತನೆ ದಾರಿದೀಪ

## ಸಚಿವ ಮಧು ಬಂಗಾರಪ್ಪ ಹೇಳಿಕೆ । ಬ್ರಹ್ಮ ಶ್ರೀ ನಾರಾಯಣಗುರು ಜಯಂತೋತ್ಸವ



ಮೈಸೂರು: ಸಾಮಾಜಿಕ ಸಮಾನತೆ ಮತ್ತು ಸೌಹಾರ್ದತೆಗೆ ನಾರಾಯಣ ಗುರುಗಳ ಚಿಂತನೆಗಳೇ ದಾರಿದೀಪ. ಶಿಕ್ಷಣ ಕ್ರಾಂತಿಯ ಮೂಲಕ ಸಮಾಜದ ಕತ್ತಲೆ ಹೋಗಲಾಡಿಸಿದ ಯುಗಪುರುಷ ನಾರಾಯಣ ಗುರು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಚಿವ ಮಧು ಬಂಗಾರಪ್ಪ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಬ್ರಹ್ಮ ಶ್ರೀ ನಾರಾಯಣಗುರು ಜಯಂತೋತ್ಸವ ಸಮಿತಿಯ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ಬ್ರಹ್ಮ ಶ್ರೀ ನಾರಾಯಣಗುರು ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ನಾವು ಮನುಷ್ಯರಾಗಿ, ಗೌರವದಿಂದ ಬದುಕಲು ವಿದ್ಯೆಯು ಅತ್ಯಂತ ಅಗತ್ಯ ಎಂಬುದನ್ನು ಮನಗಂಡು ನಮಗೆ ಶಿಕ್ಷಣದ ಬಾಗಿಲು ತೆರೆದುಕೊಟ್ಟ ಮಹಾನ್ ಕ್ರಾಂತಿಕಾರಿ ಬ್ರಹ್ಮಶ್ರೀ ನಾರಾಯಣ ಗುರುಗಳು. ಕೇರಳದಲ್ಲಿ ಜನ್ಮತಾಳಿದ ಅವರು ಶಾಲೆಗಳನ್ನು ದೊಡ್ಡದು ಮಾಡಿ, ದೇವಸ್ಥಾನಗಳ ಆಡಂಬರವನ್ನು ಚಿಕ್ಕದು ಮಾಡಿ' ಎಂಬ ಕ್ರಾಂತಿಕಾರಿ ಸಂದೇಶ ನೀಡಿದರು ಮೂಢನಂಬಿಕೆಗಳಿಗಿಂತ ಅರಿವು ನೀಡುವ ಶಿಕ್ಷಣವೇ ಶ್ರೇಷ್ಠವೆಂಬುದನ್ನು ಜಗತ್ತಿಗೆ ಸಾರಿದರು ಎಂದು ಹೇಳಿದರು.

ಇಂತಹ ಮಹಾನ್ ಮಾನವತಾವಾದಿ ನಾರಾಯಣ ಗುರುಗಳ ವಿಚಾರಧಾರೆ ಹಾಗೂ ತತ್ತ್ವಗಳನ್ನು ಆಳವಾಗಿ ಅಧ್ಯಯನ ಮಾಡಲು ಮಂಗಳೂರಿನಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸಿ ಸಂಶೋಧನೆಗೆ ಪ್ರೋತ್ಸಾಹ ನೀಡುವಂತೆ ಮಾಡಲಾಗುತ್ತಿದೆ. ಶಾಲಾ–ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಶ್ರೀ ನಾರಾಯಣ ಗುರುಗಳ ಜೀವನ, ಅವರ ಸಾಹಿತ್ಯ ಮತ್ತು ಸಾಮಾಜಿಕ ಕೊಡುಗೆಗಳ ಬಗ್ಗೆ ಕಡ್ಡಾಯವಾಗಿ ಅಧ್ಯಯನ ಸಾಮಗ್ರಿಗಳನ್ನು ಅಳವಡಿಸಿ, ಯುವಜನರಲ್ಲಿ ಸೌಹಾರ್ದತೆ ಬೆಳೆಸಲಾಗುವುದು ಮತ್ತು ಮಾನವೀಯ ಮೌಲ್ಯಗಳನ್ನು ಬೋಧಿಸಿದ ಈ ಮಹಾನ್ ಚೇತನದ ಕೊಡುಗೆಯನ್ನು ಮುಂಬರುವ ಯುವ ಪೀಳಿಗೆಗೆ ತಲುಪಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹೇಳಿದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ ನಾರಾಯಣ ಗುರುಗಳು ಸಮಾಜದಲ್ಲಿದ್ದ ತಾರತಮ್ಯ, ಅಸ್ಪೃಶ್ಯತೆ ಹಾಗೂ ಕಂದಾಚಾರಗಳನ್ನು ತೊಡೆದುಹಾಕಿ ಒಂದೇ ಜಾತಿ, ಒಂದೇ ಮತ, ಒಬ್ಬನೇ ದೇವರು ಎಂಬ ತತ್ತ್ವದ ಮೇಲೆ ಸಮಾನತೆಯ ಸಮಾಜವನ್ನು ಕಟ್ಟಲು ಶ್ರಮಿಸಿದವರು. ಅವರು ನೀಡಿದ ಮುಖ್ಯ ಸಂದೇಶಗಳಲ್ಲಿ ಶಿಕ್ಷಣ ಮತ್ತು ಸಂಘಟನೆ ಪ್ರಮುಖವಾದವು. ಶಿಕ್ಷಣದಿಂದ ಸ್ವತಂತ್ರರಾಗಿ, ಸಂಘಟನೆಯಿಂದ ಬಲಶಾಲಿಗಳಾಗಿ ಎಂದು ಅವರು ನೀಡಿದ ಕರೆ ತುಳಿತಕ್ಕೊಳಗಾದ ಸಮುದಾಯಗಳಿಗೆ ಜ್ಞಾನ ಮತ್ತು ಜಾಗೃತಿಯ ಬಾಗಿಲನ್ನು ತೆರೆಯಿತು. ದೇವಾಲಯಗಳ ನಿರ್ಮಾಣದ ಜೊತೆಗೆ ಶಾಲೆಗಳನ್ನು ಕಟ್ಟುವುದು ಮತ್ತು ಜ್ಞಾನಾರ್ಜನೆಗೆ ಮೊದಲ ಆದ್ಯತೆ ನೀಡುವುದು ಅವರ ಮೂಲ ಉದ್ದೇಶವಾಗಿತ್ತು ಎಂದು ಹೇಳಿದರು.

ಸೋಲೂರು ಆರ್ಯ ಈಡಿಗ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ವಿಖ್ಯಾತಾನಂದ ಸ್ವಾಮೀಜಿ ಮಾತನಾಡಿ 19ನೇ ಶತಮಾನದ ಉತ್ತರಾರ್ಧ ಮತ್ತು 20ನೇ ಶತಮಾನದ ಆರಂಭದಲ್ಲಿ, ಸಮಾಜದಲ್ಲಿದ್ದ ಜಾತೀಯತೆ, ಅಸ್ಪೃಶ್ಯತೆ ಹಾಗೂ ಮೂಢನಂಬಿಕೆಗಳ ವಿರುದ್ಧ ಶಸ್ತ್ರ ಹಿಡಿಯದೆ, ಶಾಂತಿ ಮತ್ತು ಜ್ಞಾನದ ಮಾರ್ಗದಲ್ಲೇ ಮಹಾನ್ ಕ್ರಾಂತಿ ಮಾಡಿದವರು ನಾರಾಯಣ ಗುರುಗಳು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಿವಮೊಗ್ಗ ನಾರಾಯಣ ಗುರು ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ರೇಣುಕಾ ನಂದ ಸ್ವಾಮೀಜಿ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪ .ಎಂ, ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಸ್ ಲಿಮಿಟೆಡ್ ಅಧ್ಯಕ್ಷ ಎಚ್.ಡಿ.ಗಣೇಶ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಮತ್ತು ಕುಲಸಚಿವ ಡಾ.ಮೋಹನ ಚಂದ್ರಗುತ್ತಿ ಉಪಸ್ಥಿತರಿದ್ದರು.

### ಅಂಬೇಡ್ಕರ್ ಚಿಂತನೆಗೆ ಬಿಜೆಪಿಯ ತಿಥಿ

**ಮೈಸೂರು:** ಚುನವಣಾ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಯನ್ನು ಬಿಜೆಪಿಯವರು ತಿಥಿ ಮಾಡುತ್ತಿದ್ದಾರೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದೇಶದ ಚುನವಣಾ ವ್ಯವಸ್ಥೆಗೆ ಅಂಬೇಡ್ಕರ್ ಬದ್ರ ಬುನಾದಿ ಹಾಕಿಕೊಟ್ಟಿದ್ದರು, ಬಿಜೆಪಿಯವರು ಅದನ್ನ ತಿಥಿ ಮಾಡುತ್ತಿದ್ದಾರೆ ಆದರೆ ಜನರು ಅಷ್ಟು ಸುಲಭವಾಗಿ ಬಿಡುವುದಿಲ್ಲ ಎಂದು ಹೇಳಿದರು. ನಮ್ಮ ದೇಶ ನಡೆಯುತ್ತಿರುವುದೇ ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲೆ, ಅದರ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಬಿಜೆಪಿಯವರಿಗೆ ಜನರೇ ಬೀದಿಗೆ ಬಂದು ಹೋರಾಟ ಮಾಡಿ ನಮ್ಮ ಹಕ್ಕನ್ನು ಪಡೆಯಲಿದ್ದಾರೆ. ಅದು ಈಗ ಆಗುತ್ತದೆ. ಅಹಿಂದ ಸಂಘಟನೆಯಲ್ಲಿ ಯಾವುದೇ ಬಿರುಕಿಲ್ಲ, ಎಲ್ಲವೂ ಚೆನ್ನಾಗಿದೆ ಮತ್ತು ಎಲ್ಲರಿಗೂ ಒಳ್ಳೆಯದಾಗಬೇಕು. ಅಹಿಂದದ ಎಲ್ಲರೂ ಒಟ್ಟಿಗೆ ಇದ್ದಾರೆ. ಎಲ್ಲವೂ ಚೆನ್ನಾಗಿಯೇ ನಡೆಯುತ್ತದೆ.ನಮ್ಮ ಸರ್ಕಾರವಂತೂ ಅಹಿಂದ ಬಗ್ಗೆ ಹೆಚ್ಚು ಕಾಳಜಿ ವಹಿಸಿದರ ಎಂದು ಹೇಳಿದರು. ತಲೆಯಲ್ಲಿ ಬುದ್ಧಿ ಇಲ್ಲದವರು ಮಾತನಾಡಿರುವುದ ಕ್ಕೆಲ್ಲಾ ನನಗೆ ಉತ್ತರಿಸಿ ಅಭ್ಯಾಸವಿಲ್ಲ. ನಾಲ್ಕು ಒಳ್ಳೆ ಕೆಲಸ ಆಗಿರುವ ಬಗ್ಗೆ ಮಾತಾಡೋಣ, ಯಾರೋ ಏನೊ ಹೇಳುತ್ತಾರೆ ಎಂದರೆ ಅದಕ್ಕೆಲ್ಲಾ ಉತ್ತರಕೊಡಬಾರದು, ಅವರ ಮೇಲೆ ಪ್ರಕರಣ ದಾಖಲಾಗಿದ್ದರೆ ಕಾನೂನು ನೋಡಿಕೊಳ್ಳುತ್ತದೆ. ಯಾವಾಗಲೂ ನಾವು ಒಳ್ಳೆ ಕೆಲಸ ಮಾಡಬೇಕು, ಕೆಟ್ಟದನ್ನು ಮರೆತು ಮುಂದೆ ಹೋಗಬೇಕು ಎಂದು ಹೇಳಿದರು.

# ಮಕ್ಕಳಿಗೆ ಡಾ.ಅಂಬೇಡ್ಕರ್ ಬಗ್ಗೆ ತಿಳಿಸಿ: ಗಿರೀಶ್‌ಚಂದ್ರ

ಮೈಸೂರು: ನಮ್ಮ ಪರಿಶಿಷ್ಟ ಜಾತಿ ಸಮುದಾಯದ ಸುಭದ್ರತೆಗೆ ಡಾ.ಅಂಬೇಡ್ಕರ್ ಕಾರಣವಾಗಿದ್ದು, ಪ್ರತಿಯೊಬ್ಬ ಪೋಷಕರೂ ಮನೆಗಳಲ್ಲಿ ತಮ್ಮ ತಮ್ಮ ಮಕ್ಕಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ತಿಳಿಸಿ ಅರಿವು ಮೂಡಿಸಿ ಎಂದು ಡಾ.ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಸ್ನೇಹ ಸೌಹಾರ್ದ ಸಂಘದ ಅಧ್ಯಕ್ಷ ಗಿರೀಶ್ ಚಂದ್ರ ತಿಳಿಸಿದರು.

ಮೈಸೂರಿನ ಸಿದ್ದಾರ್ಥ ನಗರದಲ್ಲಿರುವ ಸಿದ್ದಾರ್ಥ ಸ್ಪೋರ್ಟ್ ಕ್ಲಬ್ನಲ್ಲಿ ನಡೆದ ಸಂಘದ 2025–26ನೇ ಸಾಲಿನ 18ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ಸಮಾಜದಲ್ಲಿನ ಸಮಸ್ಯೆಗಳು ಹಾಗೂ ಅವುಗಳ ನಿವಾರಣೆಗಾಗಿ ಡಾ.ಅಂಬೇಡ್ಕರ್‌ರವರ ಹೋರಾಟ ಮತ್ತು ಅವರು ಬರೆದ ಕಾನೂನಿನ ಅರಿವು ಅತ್ಯಗತ್ಯವಾಗಿದೆ. ಅದಕ್ಕಾಗಿ ತಮ್ಮ ಮಕ್ಕಳಿಗೆ ಅಂಬೇಡ್ಕರ್‌ರವರ ಜೀವನ ಚರಿತ್ರೆ ಹಾಗೂ ಅವರ ಸಾಧನೆಗಳನ್ನು ಓದಲು ಹೇಳಿ ಎಂದು ಸಲಹೆ ನೀಡಿದ ಅವರು, ಅಂಬೇಡ್ಕರ್ ಹೆಸರಿನಲ್ಲಿ ನಡೆಯುವ ಸಭೆ, ಸಮಾರಂಭ, ವಿಚಾರ ಸಂಕಿರಣಗಳಿಗೆ ತಮ್ಮ ಮಕ್ಕಳನ್ನು ಕರೆದು ಕೊಂಡು ಹೋಗಬೇಕು ಎಂದು ಸಲಹೆ ನೀಡಿದರು.



ಸಂಘದ ಅಧ್ಯಕ್ಷ ಡಾ.ಗಿರೀಶ್ಚಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ 2025–26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆರಂಭದಲ್ಲಿ ಸಂಘಕ್ಕೆ ಗೌರವಾಧ್ಯಕ್ಷರಾಗಿ ಇಂಜಿನಿಯರ್ ಕಾಂತರಾಜು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿ ಅನುಮೋದನೆ ಪಡೆಯಲಾಯಿತು. ಇದೇ ವೇಳೆ ನಿರ್ದೇಶಕರಾಗಿ ವಸಂತಕುಮಾರ್ ಮತ್ತು ಶಿವಕುಮಾರ್ ಅವರನ್ನು ಆಯ್ಕೆ ಮಾಡಿ ಅನುಮೋದಿಸಲಾಯಿತು. ಕಾರ್ಯಕ್ರಮದಲ್ಲಿ 80 ವರ್ಷ ಪೂರೈಸಿರುವ ಸಂಘದ ಹಿರಿಯ ಸದಸ್ಯರಾದ ಎಂ.ನಂಜಯ್ಯ, ಎ.ಮಾದಯ್ಯ, ಕೆ.ವೀರಯ್ಯ, ಶಿವಣ್ಣ, ಶ್ರೀನಿವಾಸಯ್ಯ, ಎನ್.ಸಿ.ರಾಜಶೇಖರ್, ಮಹದೇವು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಇದೇ ವೇಳ ನಿವೃತ್ತ ಜಿಲ್ಲಾಧಿಕಾರಿ ಹಾಗೂ ನಮ್ಮ ಸಂಘದ ಹಿರಿಯ ಸದಸ್ಯರಾದ ಎಂ.ಆರ್. ರವಿ ಐಎಎಸ್, ಹಾಗೂ ಎಸ್.ಜೆ.ನರಸಿಂಹಮೂರ್ತಿ ಎಇಇ, ಮತ್ತು ಕೈಲಾಸಮೂರ್ತಿ (ಎಇಇ), ನಂಜುಡಯ್ಯ ತೋಟರಾಗಿಕೆ ಇಲಾಖೆ ಇವರನ್ನುಸ ಂಘದ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್ಸಿ, ಪಿಯೂಸಿಯಲ್ಲಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರೋತ್ಸಾಯ ಧನ ನೀಡಿ ಗೌರವಿಸಿ ಸನ್ಮಾನಿಸಲಾಯಿತು. ಇದೇ ವೇಳೆ ಸಂಘದ ಹಿರಿಯ ಸದಸ್ಯರಾದ ಎನ್.ಮಹ 'ದೇವಸ್ವಾಮಿ ಅವರು ಕಾರ್ಯಪಾಲಕ ಅಭಿಯಂತರರಾಗಿ ಬಡ್ತಿ ಹೊಂದ್ದರಿಂದ ಅವರನ್ನು ಅಭಿನಂದಿಸಲಾಯಿತು. ಸನ್ಮಾನಿತ ನಿವೃತ್ತ ಜಿಲ್ಲಾಧಿಕಾರಿಗಳಾದ ಡಾ.ಎಂ.ಆರ್.ರವಿ ಮಾತನಾಡಿ ಸಂಘದ ಕಾರ್ಯವೈಖರಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ ಸಂಘದ ಉನ್ನತಿಗಾಗಿ ಮತ್ತು ಸಮುದಾದಯ ಅಭಿವೃದ್ಧಿಗಾಗಿ ಸಮಾಜಮುಖಿಯಾಗಿ ನಾನೂ ಕೂಡ ನಿಲ್ಲುತ್ತೇನೆ ಎಂದು ತಿಳಿಸಿದರು. ಇದೇ ವೇಳೆ ಸಂಘದಲ್ಲಿ ಮಹಿಳಾ ಸಬಲೀಕರಣದ ಉನ್ನತಿಗಾಗಿ 30 ನಿರುದ್ಯೋಗಿ ಮಹಿಳೆಯರಿಗೆ ಹೊಲಿಗೆ ತರಬೇತಿ ನಿಡುತ್ತಿರುವ ಮೋಹನ ಕುಮಾರಿ ಅವರಿಗೆ ಪ್ರಶಂಸಿಸಲಾಯಿತು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಕೆ.ಎಂ.ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಸಿ.ಕುಮಾರಸ್ವಾಮಿ, ಖಜಾಂಚಿ ಎಚ್. ಎಸ್.ಸಿದ್ದಲಿಂಗಯ್ಯ, ಸಂಘಟನಾ ಕಾರ್ಯದಶಿ ರಾಮಾನುಜ, ನಿರ್ದೇಶಕರಾದ ನಿವೃತ್ತ ಬ್ಯಾಂಕ್ ಅಧಿಕಾರಿ ಸಿದ್ದರಾಜು ಎಂ., ಸಿದ್ದರಾಜು ಎನ್. ಸಿದ್ದರಾಜು, ದಯಾನಂದ, ವರದರಾಜು, ಕುಮಾರಸ್ವಾಮಿ ಎಂ.ಎ., ಲಿಂಗೋದಯ ಕುಮಾರ, ಶ್ರೀಮತಿ ಗಾಯಿತ್ರಿ, ಶ್ರೀಮತಿ ಲತಾಮೋಹನ್, ಶಿವಕುಮಾರ್ ಮತ್ತು ವಸಂತಕುಮಾರ್ ಹಾಜರಿದ್ದರು.

# ಕುಡಿಯುವ ನೀರಿನ ಕಾಮಗಾರಿ ತ್ವರಿತ ಪೂರ್ಣಗೊಳಿಸಿ

## ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಸೂಚನೆ | ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ | ಕುಡಿಯುವ ನೀರಿಗೆ ಆದ್ಯತೆ

ಚಾಮರಾಜನಗರ: ಜಿಲ್ಲೆಯಲ್ಲಿ ಕುಡಿಯುವ ನೀರಿನ ಕಾಮಗಾರಿ ವಿಳಂಬವಾಗದಿದ್ದರೂ ಆದ್ಯತೆಯನ್ನಾದರೂ ಪೂರ್ಣಗೊಳಿಸಬೇಕು. ವಿಶೇಷವಾಗಿ ಅರಣ್ಯ ಭಾಗಗಳಲ್ಲಿ ವಾಸಿಸುತ್ತಿರುವ ಜನರಿಗಾಗಿ ಕೈಗೆತ್ತಿಕೊಂಡಿರುವ ಕುಡಿಯುವ ನೀರಿನ ಕಾಮಗಾರಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಅಡ್ಡಿ ಮಾಡಬಾರದು ಎಂದು ಪಶುಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಸೂಚನೆ ನಿಡಿದರು

ನಗರದ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಇದೆ. ಕುಡಿಯುವ ನೀರಿನ ಕಾಮಗಾರಿಗಳನ್ನು ವೇಗವಾಗಿ ಮುಗಿಸಿ ಜನರಿಗೆ ನೀರು ಒದಗಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ. ಅರಣ್ಯ ಭಾಗದ ಜನರಿಗೆ ಕುಡಿಯುವ ನೀರಿಗಾಗಿ ಒದಗಿಸಲಾಗುತ್ತಿರುವ ಯೋಜನೆಗಳಿಗೆ ಅವಕಾಶ ಮಾಡಬಾರದು. ಪೋಡುಗಳಲ್ಲಿ ನೀರು ಪೂರೈಸಲು ಅವಕಾಶ ಮಾಡಿಕೊಡಬೇಕು




ಹಾಗೂ ಈ ವಿಚಾರದಲ್ಲಿ ವಿಳಂಬ ಧೋರಣೆ ಅನುಸರಿಸಬಾರದು ಎಂದು ಸಚಿವರು ಕಟ್ಟುನಿಟ್ಟಾಗಿ ಹೇಳಿದರು.

ಕೆರೆಗಳಿಗೆ ಸಮರ್ಪಕವಾಗಿ ನೀರು ತುಂಬಿಸುವುದು, ಕಲ್ಯಾಣ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ, ಗ್ರಾಮೀಣ ವಸತಿ ಯೋಜನೆ, ಅರಣ್ಯ ಇಲಾಖೆ, ಲೋಕೋಪಯೋಗಿ, ಪಂಚಾಯತ್ ರಾಜ್, ರೇಷ್ಮೆ, ಮೀನುಗಾರಿಕೆ, ಕನ್ನಡ ಮತ್ತು ಸಂಸ್ಕೃತಿ, ಆಹಾರ ಇಲಾಖೆ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಪ್ರಾದೇಶಿಕ ಸಾರಿಗೆ, ಸಣ್ಣ ನೀರಾವರಿ, ಶಾಲಾ ಶಿಕ್ಷಣ ಹಾಗೂ ಅಬಕಾರಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿಗೆ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರು ಸುದೀರ್ಘವಾಗಿ ಪರಿಶೀಲಿಸಿದರು. ಇದರೊಂದಿಗೆ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ವಿವರವಾಗಿ ಪರಾಮರ್ಶಿಸಲಾಯಿತು. ರಾಜ್ಯ ಗ್ಯಾರಂಟಿ ಯೋಜನೆ ಸಭೆಯಲ್ಲಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷೆ ಪುಷ್ಪ ಅಮರನಾಥ್, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ. ಚಂದ್ರು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪಂಚಾಯತ್ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಕೆಡಿಪಿ ಸಮಿತಿ ಸದಸ್ಯರಾದ ಶಂಕರಪ್ಪ, ಭವ್ಯ ಮುನಿರಾಜು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

### ಶಾಸಕರ ಆಗ್ರಹ, ಜಲಜೀವನ್ ಮಿಷನ್ ಪ್ರಗತಿ ಪರಿಶೀಲನೆ

ಜಲಜೀವನ್ ಮಿಷನ್ ಯೋಜನೆಯು ಇನ್ನೂ ಎಷ್ಟು ಭಾಗಗಳಲ್ಲಿ ಕಾಮಗಾರಿ ಪೂರ್ಣಗೊಂಡಿದೆ ಮತ್ತು ಇದುವರೆಗೆ ಎಷ್ಟು ಕಾಮಗಾರಿ ನಿರ್ವಹಿಸಿ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಲಾಗಿದೆ ಎಂಬ ಬಗ್ಗೆ ಸಮಗ್ರ ವರದಿಯನ್ನು ಸಲ್ಲಿಸಬೇಕು ಎಂದು ಅಧಿಕಾರಿಗಳು ಸೂಚಿಸಿದರು. ಜಿಲ್ಲೆಯಲ್ಲಿ ಬರ ಕುಡಿಯುವ ನೀರಿನ ಪೂರೈಕೆಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು ಮತ್ತು ಸಾಮಾನ್ಯ ಗ್ರಾಮಗಳಿಗೆ ನೀರು ಒದಗಿಸಬೇಕು ಅತ್ಯಂತ ತುರ್ತು ಕೆಲಸವಾಗಿದೆ. ಇದೇ ವೇಳೆ ಮಾತನಾಡಿದ ಶಾಸಕ ಎ.ಆರ್. ಕೃಷ್ಣಮೂರ್ತಿ, ಪುರಾಣಿಪೊಡುವಿನಲ್ಲಿ ಕುಡಿಯುವ ನೀರಿಗೆ ತಕ್ಷಣ ಕ್ರಮವಾಗಬೇಕು. ಆದಿವಾಸಿ ಕಾಲೋನಿಗಳ ಜನರು ಕಷ್ಟದಲ್ಲಿದ್ದು, ಅವರ ಮೂಲಸೌಕರ್ಯಗಳಿಗೆ ಕೊರತೆಯಾಗಬಾರದು. ಮನೆಗಳ ಸೌಲಭ್ಯಕ್ಕೂ ಅವಕಾಶವಿದ್ದು, ಆದಷ್ಟು ಬೇಗ ಜನರಿಗೆ ಸೌಕರ್ಯ ಕಲ್ಪಿಸಲು ಕ್ರಮವಹಿಸಬೇಕು. ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿ, ತಮ್ಮ ವಿಧಾನಸಭಾ ಕ್ಷೇತ್ರ ಕುಡಿಯುವ ನೀರಿನ ತೊಂದರೆ ನೀಗಿಸಲು ಹೆಚ್ಚಿನ ಅನುದಾನ ಅಗತ್ಯವಿದ್ದು, ಶೀಘ್ರ ಒದಗಿಸಬೇಕು ಹಾಗೂ ಪೂರ್ಣಗೊಂಡಿರುವ ಜೆಜೆಎಂ ಕಾಮಗಾರಿಯ ಬಗ್ಗೆ ಸಂಪೂರ್ಣ ಪರಿಶೀಲನೆಯಾಗಬೇಕು. ಶಾಸಕ ಹೆಚ್. ಎಂ. ಗಣೇಶ್ ಪ್ರಸಾದ್ ಮಾತನಾಡಿ, ಸಾಮಾನ್ಯ ಗ್ರಾಮಗಳಿಗೆ ನೀರು ಪೂರೈಸಲು ಅಗತ್ಯ ಅನುದಾನ ಹಂಚಿಕೆ ಮಾಡಬೇಕು. ಅಧಿಕಾರಿಗಳು ಯೋಜನಾಬದ್ಧವಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ತೆಗೆದುಕೊಳ್ಳುವಂತೆ ಸೇರಿಸಿದೆ.

### ಮೇವು ವಿತರಣೆ ಮತ್ತು ಬೆಳೆ ನಷ್ಟದ ಸಮೀಕ್ಷೆ

ಮೇವು ಲಭ್ಯತೆ ಬಗ್ಗೆ ಪರಿಶೀಲಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಮೇವು ಬೆಳೆಯಲು ಮೇ ಕಿಟ್ಟಗಳನ್ನು ನೀಡಲಾಗುತ್ತಿದೆ. ನೀರು ಲಭ್ಯತೆ ಇರುವ ಕಡೆ ಮೇವಿನ ಕಿಟ್ಗಳನ್ನು ಹೆಚ್ಚು ನೀಡಿ ಮೇವು ಬೆಳೆಸಲು ಉತ್ತೇಜಿಸಬೇಕು. ಮೇವಿಗೆ ಅಭಾವ ಇದೆಯೋ ಅಂತಹ ಕಡೆ ಮೇವಿನ ಕಿಟ್ಗಳ ವಿತರಣೆಗೆ ತಕ್ಷಣ ಮುಂದಾಗಬೇಕು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಎಲ್ಲಿ ಮೇವಿನ ಕಿಟ್ಗಳನ್ನು ಒದಗಿಸಲಾಗಿದೆ. ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಕುರಿತು ಮಾಹಿತಿ ಪಡೆದ ಅವರು, ನೀರಿಲ್ಲದೆ ಅರಿಶಿಣ, ಆಲೂಗಡ್ಡೆ, ಬೆಳ್ಳುಳ್ಳಿ ಸೇರಿದಂತೆ ಇತರೆ ಬೆಳೆಗಳು ನಷ್ಟವಾಗುತ್ತದೆ. ಅಧಿಕಾರಿಗಳು ನೀಡುವಲ್ಲಿ ನಷ್ಟವಾಗಿರುವ ಎಲ್ಲ ಬೆಳೆಗಳ ವರದಿ ನಿಖರವಾಗಿ ಇರುವಂತೆ ನಿಗಾ ವಹಿಸಬೇಕು. ಇಲಾಖೆಯ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಜನರಿಗೆ ಸರಿಯಾದ ಮಾಹಿತಿ ನೀಡಲಾಗಿದೆ ಎಂದು ಸೂಚಿಸಲಾಗಿದೆ.

### ರಾಷ್ಟ್ರೀಯ ಹೆದ್ದಾರಿ ಕಾಮಗಾರಿ, ಅಂಗನವಾಡಿ, ಆರೋಗ್ಯ ಸೇವೆ

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಹಲವೆಡೆ ಅಗಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದ ಸಚಿವರು, ಅಪಘಾತಗಳು ಸಂಭವಿಸಿದವು ಸೂಚನಾ ಫಲಕಗಳು, ವಿದ್ಯುತ್ ದೀಪ, ಸಂಚಾರಿ ನಿಯಮಗಳ ಮಾಹಿತಿಯನ್ನು ಅಳವಡಿಸಬೇಕು. ಶಾಸಕ ಎಂ.ಆರ್. ಮಂಜುನಾಥ್ ಅವರು ಸತ್ತೇಗಾಲ ಬೈಪಾಸ್ ಬಳಿ ಹೈಮಾಸ್ಟ್ ಲೈಟ್ ಹಾಕಿದ್ದರಿಂದ ಗಂಭೀರ ಅಪಘಾತ ಸಂಭವಿಸಿದೆ, ಪ್ರಾಧಿಕಾರ ಹಾಗೂ ಚೆಸ್ಕಾಂ ಅಧಿಕಾರಿಗಳು ಶೀಘ್ರ ಕ್ರಮವಹಿಸಬೇಕು. ಶಾಸಕ ಎ. ಆರ್. ಕೃಷ್ಣಮೂರ್ತಿ ಅವರು ತಮ್ಮ ಕ್ಷೇತ್ರದ ವ್ಯಾಪ್ತಿಯ ಸಂಚಾರ ಫಲಕಗಳಿಲ್ಲ ಹಾಗೂ ಕಾಮಗಾರಿಯಿಂದ ತೊಂದರೆಯಾಗಿದೆ ಎಂದರೆ, ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಅವರು ಗುಂಡ್ಲುಪೇಟೆ ಭಾಗದ ರಸ್ತೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿರ್ಮಾಣವಾಗುತ್ತಿರುವ ಕಾರಣ ವಾಹನ ಸಂಚಾರಕ್ಕೆ ತೀವ್ರವಾಗಿದೆ ಸಮಸ್ಯೆಯಾಗುತ್ತಿದೆ ಎಂದು ಗಮನಸೆಳೆದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಂಗನವಾಡಿಗಳ ಕುರಿತು ಪರಾಮರ್ಶಿಸಿದ ಸಚಿವರು, ಸ್ವಂತ ಕಟ್ಟಡಗಳು ಹಾಗೂ ನಿವೇಶನಗಳ ವಿವರ ಅರ್ಜಿದಾರರು, ಜಿಲ್ಲಾಧಿಕಾರಿ ಶ್ರೀರೂಪ ಅವರ ನಿವೇಶನಗಳ ಬಗ್ಗೆ ಮಾಹಿತಿ. ಆರೋಗ್ಯ ಇಲಾಖೆಯ ಪರಿಶೀಲನೆ ವೇಳೆ, ಔಷಧಿಗಳ ದಾಸ್ತಾನು ಸಮರ್ಪಕವಾಗಿಟ್ಟುಕೊಳ್ಳುವಂತೆ ಸೂಚಿಸಿದ ಸಚಿವರು, ಹಾವು ಮತ್ತು ನಾಯಿ ಕಡಿತದಂತಹ ರೋಗಿಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಇರಬೇಕು. ವೈದ್ಯರ ಸೇವೆ ಲಭ್ಯವಾಗಬೇಕು ಹಾಗೂ ವೈದ್ಯರೊಂದಿಗೆ ಮಾನವೀಯತೆಯಿಂದ ನಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

---

# ಪ್ರಜಾಸೇವಾ ಆಂದೋಲನದಲ್ಲಿ ಸಮಸ್ಯೆಗಳ ಸುರಿಮಳೆ

ಗುಂಡ್ಲುಪೇಟೆ: ತಾಲ್ಲೂಕಿನ ಬೇಗೂರಿನಲ್ಲಿ ನಡೆದ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಸಾರ್ವಜನಿಕರು ವಿವಿಧ ಸಮಸ್ಯೆಗಳನ್ನು ಶಾಸಕರ ಮುಂದಿಟ್ಟು ಪರಿಹಾರಕ್ಕೆ ಮನವಿ ಸಲ್ಲಿಸಿದರು.



ಬೇಗೂರಿನ ಉಪ್ಪಾರ ಸಮುದಾಯ ಭವನದಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಗುವಳಿ ಹಕ್ಕುಪತ್ರ, ಕೆರೆಗಳಿಗೆ ನೀರು ತುಂಬಿಸುವುದು, ರಸ್ತೆ ದುರಸ್ತಿ, ಖಾತೆ ಸಮಸ್ಯೆ ಸೇರಿದಂತೆ ಹಲವು ಸಾರ್ವಜನಿಕ ಸಮಸ್ಯೆಗಳ ಕುರಿತು ಮನವಿಗಳನ್ನು ಸಲ್ಲಿಸಲಾಯಿತು.

ಬೆಳಚಲವಾಡಿ, ಕಮರಹಳ್ಳಿ, ರಾಘವಾಪುರ, ಗರಗನಹಳ್ಳಿ, ಹಳ್ಳದ ಮಾದಳ್ಳಿ ಸೇರಿದಂತೆ ಬೇಗೂರು ಭಾಗದ ಗ್ರಾಮಗಳ ಕೆರೆಗಳನ್ನು ಹಂತ ಹಂತವಾಗಿ ತುಂಬಿಸುವಂತೆ ಸಾರ್ವಜನಿಕರು ಶಾಸಕರಿಗೆ ಮನವಿ ಮಾಡಿದರು. ರಸ್ತೆ ದುರಸ್ತಿ ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದ ಖಾತೆ ಮತ್ತು ಸಾಗುವಳಿ ಹಕ್ಕುಪತ್ರ ಸಮಸ್ಯೆಗಳನ್ನು ಶೀಘ್ರ ಬಗೆಹರಿಸುವಂತೆ ಒತ್ತಾಯಿಸಿದರು.

ಸಾರ್ವಜನಿಕರಿಂದ ಸ್ವೀಕರಿಸಿದ ಮನವಿಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದ ಶಾಸಕ ಗಣೇಶ್ ಪ್ರಸಾದ್, ಸ್ಥಳದಲ್ಲಿಯೇ ಪರಿಹರಿಸಬಹುದಾದ ಸಮಸ್ಯೆಗಳನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡದೆ ಬಗೆಹರಿಸಬೇಕು. ರೈತರು ಹಾಗೂ ಸಾರ್ವಜನಿಕರನ್ನು ಕಚೇರಿಗಳಿಗೆ ಅಲೆದಾಡಿಸಬಾರದು ಎಂದು ಅಧಿಕಾರಿಗಳಿಗೆ ಸೂಚಿಸಿದರು.

> ▸▸ ಸ್ಥಳದಲ್ಲೇ ಸ್ಪಂದಿಸುವಂತೆ ಅಧಿಕಾರಿಗಳಿಗೆ ಶಾಸಕ ಗಣೇಶ್ ಪ್ರಸಾದ್ ಸೂಚನೆ

ಜನರ ಪರವಾಗಿ ನಾವು ಸದಾ ಇದ್ದು, ಹಂತ ಹಂತವಾಗಿ ತಾಲ್ಲೂಕಿನ ಎಲ್ಲ ಭಾಗಗಳ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗುವುದು. ಸಾರ್ವಜನಿಕರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಿ ಕೆಲಸ ಮಾಡಬೇಕು ಎಂದು ಹೇಳಿದರು

.ಕಾರ್ಯಕ್ರಮದಲ್ಲಿ ತಹಶೀಲ್ದಾರ್ ತನ್ಮಯ್, ಇಒ ಷಣ್ಮುಗಂ, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# 1.72 ಕೋಟಿ ಅವ್ಯವಹಾರ ಆರೋಪ



ಗುಂಡ್ಲುಪೇಟೆ: ಹುಂಡೀಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಸಹಿಗಳನ್ನು ನಕಲಿ ಮಾಡಿ, ಮೃತಪಟ್ಟವರು ಹಾಗೂ ಆರ್‌ಟಿಸಿ ದಾಖಲೆಗಳೇ ಇಲ್ಲದ 68 ಸದಸ್ಯರ ಹೆಸರಿನಲ್ಲಿ ?1.72 ಕೋಟಿ ಸಾಲ ಮಂಜೂರು ಮಾಡಿರುವ ಆರೋಪದ ಕುರಿತು ಸಮಗ್ರ ತನಿಖೆ ನಡೆಸಿ, ಭಾಗಿಯಾಗಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ವೀರಪ್ಪ ಆಗ್ರಹಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 68 ಸದಸ್ಯರ ಹೆಸರಿನಲ್ಲಿ ಒಟ್ಟು ?1,72,78,000 ಸಾಲ ಮಂಜೂರು ಮಾಡಿ ಅವ್ಯವಹಾರ ನಡೆಸಲಾಗಿದೆ. ಪ್ರಕರಣದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಸಾಧ್ಯತೆ ಇದ್ದು, ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಅವ್ಯವಹಾರದ ಕುರಿತು ಶಾಸಕರ ಗಮನಕ್ಕೂ ಮಾಹಿತಿ ನೀಡಲಾಗಿದ್ದು, ಪರಿಶೀಲನೆ ನಡೆಸುವುದಾಗಿ ಭರವಸೆ ನೀಡಿದ್ದರು. ಆದರೆ ಈವರೆಗೆ ವ್ಯವಸ್ಥಾಪಕ ಹಾಗೂ ಸೂಪರ್‌ವೈಸರ್ ಅವರನ್ನು ಮಾತ್ರ ಅಮಾನತುಗೊಳಿಸಲಾಗಿದೆ. ಪ್ರಕರಣದ ಸಂಪೂರ್ಣ ಸತ್ಯಾಂಶ ಹೊರಬರಲು ಸಮಗ್ರ ತನಿಖೆ ಅಗತ್ಯ ಎಂದು ಹೇಳಿದರು.

ರೈತರು ಹೆಚ್ಚುವರಿ ?5 ಸಾವಿರ ಸಾಲ ಕೇಳಿದರೂ ನೀಡಲು ಸಾಧ್ಯವಿಲ್ಲ ಎಂದು ಹೇಳುವ ಅಧಿಕಾರಿಗಳು, ಸಂಘದಲ್ಲಿ ?1.72 ಕೋಟಿ ಮೊತ್ತದ ಅವ್ಯವಹಾರ ನಡೆದಿದೆ ಎನ್ನಲಾಗುವ ಸಂದರ್ಭದಲ್ಲಿ ಅದನ್ನು ತಡೆಯಲು ಏಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್, ತಾಲ್ಲೂಕು ಮಂಡಲ ಅಧ್ಯಕ್ಷ ಸಿ. ಮಹದೇವಪ್ರಸಾದ್, ಡಿ. ಮಾದಪ್ಪ, ಜಿಡಿಎಲ್ ಸುರೇಶ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಡಾ.ನವೀನ್ ಮೌರ್ಯ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನಾಗೇಂದ್ರ, ಶೆಟ್ಟಹಳ್ಳಿ ವೀರಪ್ಪ, ನಾಗೇಶ್, ಅಗತಗೌಡನಹಳ್ಳಿ ಬಸವರಾಜು, ನಮೋ ಮಂಜು, ಯೋಗೇಶ್, ಶಿಂಡನಪುರ ಮಂಜುನಾಥ್, ವೆಂಕಟೇಶ್, ನಂಜಪ್ಪ ಉಪಸ್ಥಿತರಿದ್ದರು.

---

# ಗಲಭೆ ಸೃಷ್ಟಿ: ಕ್ರಮಕ್ಕೆ ಒತ್ತಾಯ

ಮೈಸೂರು: ಶಾಂತಿಯುತವಾಗಿದ್ದ ಟಿ. ನರಸೀಪುರದಲ್ಲಿ ಗಣೋಶೋತ್ಸವ ವೇಳೆ ಕೋಮು ಸಂಘರ್ಷ ಸೃಷ್ಟಿಸಲು ನಡೆದ ಯತ್ನ ಖಂಡನೀಯ. ಇದಕ್ಕೆ ಕಾರಣರಾದವರ ವಿರುದ್ಧ ಪೊಲೀಸರು ಕೂಡಲೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ. ಪುಟ್ಟಸಿದ್ದಶೆಟ್ಟಿ ಆಗ್ರಹಿಸಿದರು.



ಭಾರತ ಬಹು ಭಾಷೆ, ಜನಾಂಗ, ಧರ್ಮ, ಜಾತಿಗಳ ವೈವಿಧ್ಯತೆ ಯಿಂದ ಕೂಡಿದೆ. ಆದರೆ ಹಲವರು ಈ ಸಾಮರಸ್ಯಕ್ಕೆ ಅಡ್ಡಿ ತರುವ ಯತ್ನ ನಡೆಸುತ್ತಿರುತ್ತಾರೆ. ಅಂತಹ ಘಟನೆಗೆ ಒಂದು ಉದಾಹರಣೆ ಟಿ. ನರಸೀಪುರದ ಘಟನೆ ಆಗಿದೆ. ಗಣೇಶೋತ್ಸವ ಮೆರವಣಿಗೆ ವೇಳೆ ಮಸೀದಿಯೊಂದರ ಬಳಿ ಅತಿರೇಕದಿಂದ ವರ್ತಿಸಬಾರದೆಂದು ಇನ್‌ಸ್ಪೆಕ್ಟರ್ ನೀಡಿದ ಎಚ್ಚರಿಕೆ ದುರ್ಬಳಕೆ ಮಾಡಿಕೊಂಡ ಮಾಜಿ ಸಂಸದ ಪ್ರತಾಪ್‌ಸಿಂಹ ಹಾಗೂ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅಲ್ಲಿ ದೊಡ್ಡದೊಂದು ಅನಾಹುತಕ್ಕೆ ಕಾರಣವಾಗಲಿದ್ದರು. ಇನ್ನು, ಸಂಸದರಾಗಿದ್ದ ವೇಳೆ ಪ್ರತಾಪ್‌ಸಿಂಹ ತಮ್ಮ ಕ್ಷೇತ್ರಕ್ಕೆ ಏನೇನೂ ಕೊಡುಗೆ ನೀಡಿಲ್ಲ, ಶಾಂತಿಯುತವಾಗಿ ಹನುಮೋತ್ಸವ ನಡೆಯುವ ಹುಣಸೂರಿನಲ್ಲಿಯೂ ಉದ್ರಿಕ್ತ ಪರಿಸ್ಥಿತಿಗೆ ಪ್ರಚೋದನೆ ನೀಡುವ ಕೆಲಸ ಮಾಡಿದ್ದರು. ಹೀಗಾಗಿ ಇಂತಹವರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸದಿರು. ಇನ್ನಿತರ ಪದಾಧಿಕಾರಿಗಳಾದ ವೆಂಕಟೇಶ್ ಬಾಬು, ರಮೇಶ್, ಶಿವರಾಜಪ್ಪ ಇದ್ದರು.

# ಕಾಡಾನೆ ದಾಳಿಗೆ ವ್ಯಕ್ತಿ ಬಲಿ: ಸಚಿವರ ಸಾಂತ್ವನ

ಚಾಮರಾಜನಗರ: ತಾಲೂಕಿನ ಕುಳ್ಳೂರು ಗ್ರಾಮದಲ್ಲಿ ಕಾಡಾನೆ ದಾಳಿಗೆ ಮಹದೇವ ಎಂಬ ವ್ಯಕ್ತಿ ಮೃತಪಟ್ಟ ಹಿನ್ನೆಲೆಯಲ್ಲಿ ಪಶುಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರು ಇಂದು ಮೃತರ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.



ಮೃತ ಮಹದೇವ ಅವರ ಕುಟುಂಬಕ್ಕೆ ಸಚಿ ವರು ವೈಯಕ್ತಿಕವಾಗಿ ಪರಿಹಾರ ಧನ ವಿತರಿಸಿದರು. ಮಹದೇವ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದು, ಕುಟುಂಬದ ನೆರವಿಗಾಗಿ ಒಬ್ಬರಿಗೆ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಕಲ್ಪಿಸುವುದಾಗಿ ಭರವಸೆ ನೀಡಿದರು. ಚಾಮರಾಜನಗರ ಜಿಲ್ಲೆ ಹಾಗೂ ತಾಲೂಕಿನಲ್ಲಿ ಇತ್ತೀಚಿನ ದಿನಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಜನರು ಹಾಗೂ ಜಾನುವಾರುಗಳ ಮೇಲೆ ದಾಳಿ ಪ್ರಕರಣಗಳು ನಡೆಯುತ್ತಿವೆ. ಕಾಡುಪ್ರಾಣಿಗಳ ದಾಳಿ ತಡೆಗಟ್ಟಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಜನರ ಸುರಕ್ಷತೆಗೆ ಆದ್ಯತೆ ನೀಡಿ, ಕಾಡಂಚಿನ ಗ್ರಾಮಗಳಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಹೆಚ್ಚಿನ ನಿಗಾ ವಹಿಸುವಂತೆ ಸಚಿವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಬಿ.ಆರ್.ಟಿ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಮುಖಂಡರಾದ ಜಡೇಯಪ್ಪ, ಉಲ್ಲಾಸ್ ಹಾಗೂ ಗ್ರಾಮದ ಯಜಮಾನರು, ಮುಖಂಡರು ಹಾಜರಿದ್ದರು.

# ಗಾಳಿ ಸಹಿತ ಮಳೆಗೆ: ಬಾಳೆ ಬೆಳೆ ನಾಶ



**ಚಾಮರಾಜನಗರ,** ತಾಲೂಕಿನ ಹರದನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಗಾಳಿ ಸಹಿತ ಮಳೆಗೆ 2 ಎಕರೆಯಲ್ಲಿ ಬೆಳೆದಿದ್ದ 2400 ಬಾಳೆ ಬೆಳೆ ಸಂಪೂರ್ಣ ನಾಶವಾಗಿದೆ. ಇದರಿಂದ ರೈತ ಎಂ,ಮಂಜುನಾಥ ಕಂಗಾಲಗಿದ್ದಾರೆ,

ಬಂಡೀಗೆರೆ ಗ್ರಾಮದ ಸರ್ವೇ ನಂ 52 ,ಎರಡು ಎಕರೆ ಜಮೀನನಲ್ಲಿ ಬೆಳೆದಿದ್ದ 2400 ಬಾಳೆ ಕಟ್ಟೆ ಗಾಳಿಸಹಿತ ಮಳೆಗೆ ಉರುಳಿ ಬಿದ್ದಿದೆ. ಇದರಿಂದ, ಕಟಾವಿಗೆ ಬಂದ್ದಿದ್ದ ಬಾಳೆ ಪಸಲು ಸುಮಾರು 10,ರಿಂದ 12 ಲಕ್ಷ ಹಣ ನಷ್ಟ ಉಂಟಾಗಿ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಗಿದೆ, ಹಾಗೂ ಹರದನಹಳ್ಳಿ ಸುತ್ತಮುತ್ತಲಿನ ರೈತರು ಜಮೀನಿನಲ್ಲಿ ಲಕ್ಷಾಂತರ ರೂ,ಖರ್ಚುಮಾಡಿ ಬೋರವೆಲ್ ಕೊರೆಸಿ ಇದರಲ್ಲಿ ಕಡಿಮೆ ನೀರು ಬರುತಿದ್ದರು ಸಹ ಕಷ್ಟಪಟ್ಟು ಬಾಳೆ ಬೆಳೆದಿದ್ದಾರೆ

ಕೂಡಲೆ ಕೃಷಿಇಲಾಖೆ ಹಾಗೂ,ತೋಟಗಾರಿ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ,ನಷ್ಟಕ್ಕೆ ಒಳಗಾಗಿರುವ ನನಗೆ ಸರ್ಕಾರದಿಂದ ಪರಿಹಾರ ಕೊಡಿಸಬೇಕೆಂದು ರೈತ ಎಂ,ಮಂಜುನಾಥ ಆಗ್ರಹಿಸಿದರು, ಈ ವೇಳೆ ಗ್ರಾಮ ಲೆಕ್ಕಾಧಿಕಾರಿ ನಾಗರಾಜು ಅವರು ಸ್ಥಳಕ್ಕೆ ಭೇಟಿ ನೀಡಿ ಬೆಳೆಯನ್ನು ಪರಿಸಿಲಿಸಿದರು. ಈ ವೇಳೆ ರೈತರಾದ ಬಂಗಾರಶೆಟ್ಟಿ,ಜಯಕುಮಾರ್, ಚೆನ್ನಪ್ಪ, ಕುಮಾರ್ ,ಸೇರಿದಂತೆ ಇತರರು ಇದ್ದರು.

---

ಗೃಹ ಸಚಿವ ಪ್ರಿಯಾಂಗಖರ್ಗೆ ಆಗ್ರಹ

# ಮಾದಿಗ, ಸಮಗಾರ,ಡೋಹರ,ದಕ್ಕಲಿಗ, ಮೋಚಿಗಾರ ಒಕ್ಕೂಟದಿಂದ ಮನವಿ

ಚಾಮರಾಜನಗರ: ಗೃಹ ಇಲಾಖೆಯ ವೈಫಲ್ಯದಿಂದ ರಾಜ್ಯಾದ್ಯಂತ ಮಾದಿಗ ಮತ್ತು ಇತರ ದಲಿತ ಸಮುದಾಯದ ಮೇಲೆ ಸರಣಿ ಜಾತಿ ದೌರ್ಜನ್ಯ ನಡೆದಿರುವ ಎಲ್ಲಾ ಪ್ರಕರಣಗಳ ತ್ವರಿತ, ನಿಷ್ಪಕ್ಷಪಾತ ಸಮಗ್ರ ತನಿಖೆ ನಡೆಸಿ, ಎಲ್ಲಾ ಆರೋಪಗಳನ್ನು ತಕ್ಷಣವೇ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿ ಮಾದಿಗ, ಸಮಗಾರ,ಡೋಹರ,ದಕ್ಕಲಿಗ ಮತ್ತು ಮೋಚಿಗಾರ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.



ಕಳೆದ ಎರಡು ತಿಂಗಳುಗಳಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮಾದಿಗ ಸಮುದಾಯ ಸೇರಿದಂತೆ ಇತರ ದಲಿತ ಬಂದುಗಳು ಜಾತಿ ಕಾರಣಕ್ಕಾಗಿ ಕೊಲೆ ಮತ್ತು ಅತ್ಯಾಚಾರಕ್ಕೆ ಬಲಿಯಾಗುತ್ತಿರುವ ಕನಿಷ್ಠ 10 ಗಂಭೀರ ಪ್ರಕರಣಗಳು ವರದಿಯಾಗಿವೆ. ಈ ಸರಣಿ ಘಟನೆಗಳು ರಾಜ್ಯ ಸರ್ಕಾರದ ಗೃಹ ಇಲಾಖೆಯ ಸಂಪೂರ್ಣ ವೈಫಲ್ಯವನ್ನು ಬಿಂಬಿಸುತ್ತಿದ್ದು, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳಿಗೆ ಕಾನೂನು ಸುವ್ಯವಸ್ಥೆ ಹಾಗೂ ಸಂವಿಧಾನಾತ್ಮಕ ರಕ್ಷಣೆ ನಿಜಕ್ಕೂ ಜಾರಿಯಲ್ಲಿದೆಯೇ ಎಂಬ ಗಂಭೀರ ಪ್ರಶ್ನೆಯನ್ನು ಎತ್ತಿದೆ. ಈ ಹಿನ್ನೆಲೆಯಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟ ಈ ಎಲ್ಲಾ ಘಟನೆಗಳನ್ನು ತೀವ್ರವಾಗಿ ಖಂಡಿಸುತ್ತದೆ. ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ ಮಾದಿಗ ಸಮುದಾಯದ ಭೂಮಾನಂದ, ರಮೇಶ ನಕ್ಕುಂದಿ ಕೊಲೆ.ಈಚನಾಳ, ರಾಯಚೂರು – ಹೋಟೆಲ್‌ವೊಂದರಲ್ಲಿ ಮಾದಿಗೆ ಬಂಧುಗಳ ವಿರುದ್ಧ ಅಸ್ಪೃಶ್ಯತೆ ಆಚರಣೆ. ರಾಯಚೂರು ಜಿಲ್ಲೆಯ ವಕ್ರಾಣಿ, ಸಿರವಾರ ತಾ. – ಅಶ್ವಿನಿ ಛಲವಾದಿ ಅವರ ಮೇಲೆ ಅತ್ಯಾಚಾರ ಮತ್ತು ಕೊಲೆ.ರಾಯಚೂರು ಜಿಲ್ಲೆಯ ಲಿಂಗಸೂರು ತಾ. ಕರಡಕಲ್ – ಮಾದಿಗ ಗೃಹಿಣಿ ರೇಣಮ್ಮ (ರಾಣಿಮ್ಮ) ಅವರ ಮೇಲೆ ಅತ್ಯಾಚಾರ ಮತ್ತು ಕೊಲೆ.ದೊಡ್ಡಮಗ್ಗೆ, ಅರಕಲಗೂಡು ತಾ., ಹಾಸನ ಜಿ. – ಮಾದಿಗ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ(ಪೋಸ್ಕೋ) ಕಡಜತ್ತಿ, ನಂಜನಗೂಡು ತಾ., ಮೈಸೂರು ಜಿ. – ಮಾದಿಗ ಮಹಿಳೆ ಮಹಾದೇವಮ್ಮ (64) ಅವರ ಕೊಲೆ. ಊಡಗಿ, ಸೇಡಂ ತಾ., ಕಲಬುರಗಿ ಜಿ. – ಮಾದಿಗ ಸಮುದಾಯದ ಯುವಕನ ಕೊಲೆ. ಗುರುಸುಣಿಗಿ ಗುಡ್ಡ, ವಡಗೇರಾ ತಾ., ಯಾದಗಿರಿ ಜಿ. – ಸಿದ್ಧಲಿಂಗೇಶ್ವರ ದೇವಸ್ಥಾನಕ್ಕೆ ತೆರಳಿದ್ದ ಚಾಮನಹಳ್ಳಿಯ ಇಬ್ಬರು ಮಾದಿಗ ಯುವಕರ ಮೇಲೆ ಜಾತಿ ನಿಂದನೆ ಹಾಗೂ ಮಾರಣಾಂತಿಕ ಹಲ್ಲೆ. ಕಸಾಪುರ, ಮಧುಗಿರಿ ತಾ., ತುಮಕೂರು ಜಿ. – ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ಕುಣಿದದ್ದಕ್ಕೆ 17ರ ಹರೆಯದ ದಲಿತ ಬಾಲಕ ಸಿಂಹಾದ್ರಿಯ ಕಗ್ಗೊಲೆ ಯಾಗಿದೆ. ಇದರ ವಿರುದ್ದ ಕ್ರಮಕೈಗೊಳ್ಳುವಲ್ಲಿ ಗೃಹ ಇಲಾಖೆ ವಿಫಲವಾಗಿದೆ ಎಂದು ಆರೋಪಿಸಿದರು.

ಎಲ್ಲಾ ಪ್ರಕರಣಗಳ ತ್ವರಿತ, ನಿಷ್ಪಕ್ಷಪಾತ ಮತ್ತು ಸಮಗ್ರ ತನಿಖೆ ನಡೆಸಿ, ಎಲ್ಲಾ ಆರೋಪಿಗಳನ್ನು ತಕ್ಷಣ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಎಸ್ ಸಿ, ಎಸ್ ಟಿ ಕಾಯ್ದೆಯಡಿ ಕಟ್ಟುನಿಟ್ಟಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಕರ್ನಾಟಕದಲ್ಲಿ 2023ರಿಂದ 2026ರವರೆಗಿನ ದೌರ್ಜನ್ಯ ಪ್ರಕರಣಗಳ ಕುರಿತು ಜಿಲ್ಲಾವಾರು ಶ್ವೇತಪತ್ರವನ್ನು ಹೊರಡಿಸಬೇಕು ಎಂದು ಒತ್ತಾಯಿಸಿದರು. .ಜಾತಿದೌರ್ಜನ್ಯ ಪ್ರಕರಣಗಳ ಶೀಘ್ರ ವಿಚಾರಣೆಗಾಗಿ ರಾಜ್ಯ ಮಟ್ಟದ ವಿಶೇಷ ತನಿಖಾ ತಂಡ ರಚಿಸಬೇಕು ಸಂತ್ರಸ್ತರಿಗೆ ನ್ಯಾಯ ಕೊಡಿಸಬೇಕು ಇಲ್ಲದಿದ್ದರೆ ಗೃಹ ಸಚಿವರು ನೈತಿಕಹೊಣೆಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಮೂಡಹಳ್ಳಿಮೂರ್ತಿ, ರಾಮಸಮುದ್ರ ಶಿವಣ್ಣ, ಕಿರಣ್, ಅಮಚವಾಡಿ ಪುಟ್ಟಸ್ವಾಮಿ, ಅರಕಲವಾಡಿ ತಿರುಪತಿ, ನಿಂಗರಾಜು ಇತರರು ಹಾಜರಿದ್ದರು.

# ಸಮಸ್ಯೆಗಳ ಪರಿಹಾರಕ್ಕೆ ಪ್ರಜಾಸೇವೆ ಆಂದೋಲನ ಉತ್ತಮ ವೇದಿಕೆ



ಹನೂರು: ಸಾರ್ವಜನಿಕರ ವಿವಿಧ ಸೌಕರ್ಯ ಮತ್ತು ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಪ್ರಜಾಸೇವೆ ಆಂದೋಲನ ಉತ್ತಮ ವೇದಿಕೆಯಾಗಿದ್ದು, ಸಾರ್ವಜನಿಕರು ಈ ಕಾರ್ಯಕ್ರಮದ ಅನುಕೂಲವನ್ನು ಸಮರ್ಪಕವಾಗಿ ಸದುಪಯೋಗಪಡಿಸಿಕೊಳ್ಳಬೇಕೆಂದು ಶಾಸಕ ಎಂ. ಆರ್.ಮಂಜುನಾಥ್ ತಿಳಿಸಿದರು.

ತಾಲೂಕಿನ ರಾಮಾಪುರ ಶ್ರೀ ಶಿವರಾತ್ರಿ ರಾಜೇಂದ್ರ ಸಭಾ ಭವನದಲ್ಲಿ ಏರ್ಪಡಿಸಲಾಗಿದ್ದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ, ಮಧ್ಯವರ್ತಿಗಳ ಹಾವಳಿ ಮುಂತಾದ ಸಮಸ್ಯೆಗಳನ್ನು ಸಾರ್ವಜನಿಕರು ಎದುರಿಸುತ್ತಿದ್ದರು. ಆದರೆ ಈ ಕಾರ್ಯಕ್ರಮದ ಮೂಲಕ ಅದಕ್ಕೆ ಕಡಿವಾಣ ಬೀಳಲಿದೆ ಎಂದರು.

**ದೂರುಗಳ ಸುರಿಮಳೆ**

ಸಭೆಯಲ್ಲಿ ರೈತ ಮುಖಂಡ ಅಮ್ಜದ್ ಖಾನ್ ಮಾತನಾಡಿ, ಉಡುತೊರೆ ಜಲಾಶಯ ನೀರು ತುಂಬಿಸುವ ಯೋಜನೆ ಆದಷ್ಟು ಬೇಗಾ ಕಾರ್ಯಗತ ಆಗುವಂತೆ ಮನವಿ ಮಾಡಿದರು. ಇದೇ ತಿಂಗಳ 30ರಂದು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕೊಳ್ಳೇಗಾಲಕ್ಕೆ ಬರಲಿದ್ದು, ನಾನು ಈ ಸಂಬಂಧ ಒತ್ತಾಯ ಮಾಡುತ್ತೇನೆ ರೈತರು ಕೂಡ ಮನವಿ ಸಲ್ಲಿಸಿ ಗಮನ ಸೆಳೆಯಬಹುದು ಎಂದರು.

ಮತ್ತೋರ್ವ ರೈತ ಮುಖಂಡ ಚಂಗಡಿ ಕರಿಯಪ್ಪ ಮಾತನಾಡಿ, ಹೂಗ್ಯ ಗ್ರಾ.ಪಂ.ಯನ್ನು ರಾಮಾಪುರ ಹೋಬಳಿಗೆ ಸೇರಿಸಬೇಕು, ಚಂಗಡಿ ಗ್ರಾಮವನ್ನು ಸ್ಥಳಾಂತರ ಮಾಡಿ ಪುನರ್ವಸತಿ ಸೌಕರ್ಯ ಕಲ್ಪಿಸಿದರೆ ಇದು ಇತರೆ ಹಾಡಿ ಹಳ್ಳಿಗಳ ಜನಕ್ಕೆ ಪ್ರೇರಣೆ ಮತ್ತು ಮಾದರಿಯಾಗುತ್ತದೆ ಎಂದು ಗಮನ ಸೆಳೆದರು. ಈ ಸಂಬಂಧ ಶಾಸಕ ಮಂಜುನಾಥ್ ಮಾತನಾಡಿ, ಎಲ್ಲಾ ರೈತ ಮುಖಂಡರು ಹಾಗೂ ಅಧಿಕಾರಿಗಳ ಪ್ರತ್ಯೇಕ ಸಭೆ ಕರೆದು ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು. ನಾಲ್ ರೋಡ್ ಸರ್ಕಲ್ ನಲ್ಲಿರುವ ಅಂಗಡಿಗಳನ್ನು ತೆರವುಗೊಳಿಸಲು ಕ್ರಮವಹಿಸಬೇಕು , ರಾಮಾಪುರ ನಾಲ್ ರೋಡ್ ಮೂಲಕ ತಮಿಳುನಾಡಿಗೆ ಹೋಗುವ ಕರಿಕಲ್ಲು ತುಂಬಿದ ಲಾರಿಗಳಿಂದ ರಸ್ತೆ ಹಾಳಾಗುತ್ತದೆ ಇದಕ್ಕೆ ಕ್ರಮವಹಿಸಬೇಕು , ಮಲೆ ಮಹದೇಶ್ವರ ಬೆಟ್ಟದಿಂದ ಪಾಲಾರ್ ತಮಿಳುನಾಡಿಗೆ ಹೆಚ್ಚಿನ ಬಸ್ ಸೌಲಭ್ಯ ಒದಗಿಸಬೇಕು, ಗಡಿಯಂಚಿನ ಗ್ರಾಮಗಳಿಗೆ ಸಮರ್ಪಕ ಮೂಲಭೂತ ಸೌಕರ್ಯ ಕಲ್ಪಿಸಬೇಕು ಎಂದು ಕೂಡ್ಲೂರು ವೆಂಕಟೇಶ್ ಮನವಿ ಮಾಡಿದರು.

ಮಾಜಿ ಗ್ರಾ.ಪಂ.ಅಧ್ಯಕ್ಷ ಕೊಕ್ಕಬರೆ ಕುಮಾರ್ ಮಾತನಾಡಿ, ಜೆಜೆಎಂ ನವರು ಅರ್ಧ ಕೆಲಸ ಮಾಡಿ ಹಾಗೆ ಬಿಟ್ಟಿದ್ದಾರೆ. ಕೊಮ್ಮಡಿಕ್ಕಿ ಗ್ರಾಮದ ತೊಂಬೆಗೆ ಪೈಪ್ ಲೈನ್ ಅಳವಡಿಸಿ ಕಲೆಕ್ಷನ್ ಕೊಟ್ಟಿಲ್ಲ. ವಿದ್ಯುತ್ ಪೈಪ್ ಲೈನ್ ಕೂಡ ಹಾಳಾಗಿ ವಿದ್ಯುತ್ ಸೌಕರ್ಯ ಇಲ್ಲವಾಗಿದೆ. ಹಾಲಹಳ್ಳದಿಂದ ತೋಕೆರೆ, ಆನೆತಲೆದಿಂಬ, ಕೊಕ್ಕಬರೆ ರಸ್ತೆ ದುರಸ್ಥಿಗೊಳಿಸಬೇಕು ಎಂದು ಮನವಿ ಮಾಡಿದರು. ರಾಮಾಪುರ ಗ್ರಾಮದಲ್ಲಿ ಪೊಲೀಸ್ ಗಸ್ತು ಹೆಚ್ಚಿಸಬೇಕು ಎಂದು ಮಹಿಳೆಯೋರ್ವರು ಮನವಿ ಮಾಡಿದರು. ಹೂಗ್ಯ ಗ್ರಾಮದಲ್ಲಿ ಮಹಿಳೆ ಮೇಲೆ ಗಂಭೀರವಾಗಿ ಹಲ್ಲೆ ನಡೆಸಿದ ಘಟನೆ ಸಂಬಂಧ ದೂರು ನೀಡಿದ್ದರೂ ಪೊಲೀಸರು ಇದುವರೆಗೆ ಯಾವುದೇ ಕ್ರಮವಹಿಸದೆ ಇರಲು ಕಾರಣವೇನು ಎಂದು ರೈತ ಮಹಿಳಾ ಮುಖಂಡರೊಬ್ಬರು ಪ್ರಶ್ನಿಸಿದರು. ರಾಜು ಎಂಬುವರು ಆನೆಹೊಲ ಸರ್ಕಾರಿ ಶಾಲೆ ಹೆಂಚಿನ ಮನೆಯಾಗಿದ್ದು ಸೋರುತ್ತಿದೆ, ಕೋತಿಗಳು ಒಳಹೊಕ್ಕಿ ರೇಷನ್ ತಿಂದು ಹೋಗುತ್ತವೆ. ಆಗಾಗಿ ಶೀಟ್ ಹೊದಿಕೆ ವ್ಯವಸ್ಥೆ ಕಲ್ಪಿಸಿ, ಮಲೆ ಮಹದೇಶ್ವರ ಬೆಟ್ಟ ಮುಖ್ಯ ರಸ್ತೆಯಲ್ಲಿ ಗ್ರಾಮಕ್ಕೆ ಹೋಗುವ ಸ್ಥಳದಲ್ಲಿ ಬಸ್ ನಿಲ್ಲಿಸಲು ವ್ಯವಸ್ಥೆ ಮಾಡಬೇಕು , ಪೌತಿಖಾತೆ ಶೀಘ್ರದಲ್ಲಿ ಆಗುವಂತೆ ಮಾಡಬೇಕು ಎಂದರು.

**ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಿ**

ಶಾಸಕ ಮಂಜುನಾಥ್ ಕೆಡಿಪಿ ಸಭೆಯಲ್ಲಿ ಪ್ರಸ್ತಾಪಿಸಿದ ಕಿರಾಣಿ ಅಂಗಡಿಗಳಲ್ಲಿನ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಅಬಕಾರಿ, ಪೊಲೀಸ್ ಇಲಾಖೆ ಕ್ರಮವಹಿಸಬೇಕು. ಇದರಿಂದ ಸಾವಿರಾರು ಕುಟುಂಬಗಳು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿದೆ. ಹಳ್ಳಿಯ ಗುಡಂಗಡಿಗಳಲ್ಲಿ ಸಿಗುವುದಾದರೆ ಅವರಿಗೂ ಲೆಸೆನ್ಸ್ ಕೊಟ್ಟುಬಿಡಿ ಎಂದು ಖಾರವಾಗಿ ನುಡಿದರು. ಒಟ್ಟು 208 ಅರ್ಜಿಗಳು ಸಲ್ಲಿಕೆಯಾಯಿತು.

# ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ

## ಸಚಿವ ಸಿ.ಪುಟ್ಟರಂಗಶೆಟ್ಟಿ ಅವರಿಂದ ಪ್ರಶಸ್ತಿ ವಿತರಣೆ



ಚಾಮರಾಜನಗರ: ಜಿಲ್ಲಾ ಮಟ್ಟದ ದಸರಾ ಕ್ರೀಡಾಂಗಣದಲ್ಲಿ ಬ್ಯಾಡ್ಮಿಂಟನ್ ಡಬಲ್ಸ್ ವಿಭಾಗದಲ್ಲಿ ಸಿ.ಎಸ್.ಅಕ್ಷಯ್, ಎಸ್.ಮಹಾಂತೇಶ್ ಪ್ರಥಮ ಸ್ಥಾನ, ಉಲ್ಲಾಸ್, ದುಶ್ಯಂತ ದ್ವಿತೀಯ ಸ್ಥಾನ ಪಡೆದಿದ್ದಾರೆ.ಸಿಂಗಲ್ಸ್ ವಿಭಾಗದಲ್ಲಿ ಪ್ರಥಮ ಸ್ಥಾನ ಉಲ್ಲಾಸ್, ದ್ವಿತೀಯ ಸ್ಥಾನ ಜಾಯಿಸನ್ ಪಡೆದರು

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಪಶು ಸಂಗೋಪನೆ ಮತ್ತು ರೇಷ್ಮೆ ಕೃಷಿ ಖಾತೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಪುಟ್ಟರಂಗಶೆಟ್ಟಿ ವಿಜೇತರಿಗೆ ಬಹುಮಾನ, ಪ್ರಮಾಣ ಪತ್ರ ವಿತರಿಸಿ ಶುಭಕೋರಿದರು. ಈ ಸಂದರ್ಭದಲ್ಲಿ ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ಆರ್. ಗಿರೀಶ್, ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ಸಮಿತಿ ಸದಸ್ಯರಾದ ಶ್ರೀನಿವಾಸ ಪ್ರಸಾದ್, ಕ್ರೀಡಾಪಟುಗಳು ಹಾಜರಿದ್ದರು.

# ಸರ್ಕಾರಿ ಶಾಲೆಗೆ ಶಾಸಕ ಭೇಟಿ



ಹನೂರು:ತಾಲೂಕಿನ ನಾಗನತ್ತ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶನಿವಾರ ಹನೂರು ಕ್ಷೇತ್ರದ ಶಾಸಕರಾದ ಎಂ.ಆರ್. ಮಂಜುನಾಥ್ ಅವರು ಭೇಟಿ ನೀಡಿ, ಮಕ್ಕಳೊಂದಿಗೆ ಆತ್ಮೀಯವಾಗಿ ಮಾತನಾಡಿ ಸಂವಾದ ನಡೆಸಿದರು.

ಶಾಲಾ ಆವರಣಕ್ಕೆ ಆಗಮಿಸುತ್ತಿದ್ದಂತೆ ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹೂಮಾಲೆ ಹಾಕಿ ಶಾಸಕರನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ತರಗತಿ ಕೊಠಡಿಗಳಿಗೆ ಭೇಟಿ ನೀಡಿದ ಶಾಸಕರು, ಮಕ್ಕಳ ಕಲಿಕಾ ಮಟ್ಟ, ಹಾಜರಾತಿ, ಮಧ್ಯಾಹ್ನದ ಬಿಸಿಯೂಟ, ಶಾಲೆಯ ಮೂಲ ಸೌಕರ್ಯಗಳ ಬಗ್ಗೆ ಶಿಕ್ಷಕರಿಂದ ಮಾಹಿತಿ ಪಡೆದರು.

ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಶಾಸಕರು, "ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ನೀವು ಎಲ್ಲರೂ ಚೆನ್ನಾಗಿ ಓದಿ, ಉನ್ನತ ಹುದ್ದೆಗಳಿಗೆ ಹೋಗಬೇಕು. ಪೋಷಕರಿಗೆ ಮತ್ತು ಶಾಲೆಗೆ ಕೀರ್ತಿ ತರಬೇಕು. ಶಿಸ್ತು, ಸಂಸ್ಕಾರ, ವಿದ್ಯೆಯೇ ನಿಮ್ಮ ಭವಿಷ್ಯದ ಬಂಡವಾಳ" ಎಂದು ಕಿವಿಮಾತು ಹೇಳಿದರು. ಮಕ್ಕಳೊಂದಿಗೆ ಬೆರೆತು ಅವರ ಭವಿಷ್ಯದ ಕನಸುಗಳ ಬಗ್ಗೆ ಕೇಳಿ, ಮಕ್ಕಳಿಗೆ ಉತ್ತಮ ಶಿಕ್ಷಣಕ್ಕೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಲು ತಾವು ಬದ್ಧರಾಗಿರುವುದಾಗಿ ಭರವಸೆ ನೀಡಿದರು. ಮುಖ್ಯ ಶಿಕ್ಷಕಿ ಪೂರ್ಣಿಮ ಸಹ ಶಿಕ್ಷಕರು ಜ್ಯೋತಿಲಕ್ಷ್ಮಿ ,ವಿದ್ಯಾ ಎಸ್‌ಡಿಎಂಸಿ ಅಧ್ಯಕ್ಷರು ಪೋಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಗುಂಡ್ಲುಪೇಟೆ ಆಡಳಿತ ವ್ಯವಸ್ಥೆ ಹದಗೆಟ್ಟಿದೆ

## ಶಾಸಕ ಗಣೇಶ್ ಪ್ರಸಾದ್ ವಿರುದ್ಧ ಮಾಜಿ ಶಾಸಕ ನಿರಂಜನಕುಮಾರ್ ವಾಗ್ದಾಳಿ



ಗುಂಡ್ಲುಪೇಟೆ: ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ರೈತರು ಹಾಗೂ ಜನಸಾಮಾನ್ಯರ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಅವುಗಳನ್ನು ಬಗೆಹರಿಸುವಲ್ಲಿ ಕ್ಷೇತ್ರದ ಶಾಸಕ ಗಣೇಶ್ ಪ್ರಸಾದ್ ವಿಫಲರಾಗಿದ್ದಾರೆ ಎಂದು ಮಾಜಿ ಶಾಸಕ ಸಿ. ಎಸ್.ನಿರಂಜನಕುಮಾರ್ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ತೀವ್ರ ಬರ ಪರಿಸ್ಥಿತಿ ಇದ್ದರೂ ರೈತರಿಗೆ ಕೇವಲ ?2,500 ಬರ ಪರಿಹಾರ ನೀಡಿರುವುದು ರೈತರ ಸಂಕಷ್ಟಕ್ಕೆ ಪರಿಹಾರವಾಗುವುದಿಲ್ಲ. ಹಿಂದಿನ ಸರ್ಕಾರದ ಅವಧಿಯಲ್ಲಿ ಎಕರೆಗೆ ?25 ಸಾವಿರದವರೆಗೆ ಪರಿಹಾರ ನೀಡಲಾಗುತ್ತಿತ್ತು. ಕನಿಷ್ಠ ?25 ಸಾವಿರ ಪರಿಹಾರ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವಂತೆ ರೈತರು ನಿರಂತರವಾಗಿ ಹೋರಾಟ ನಡೆಸುತ್ತಿದ್ದರೂ ಶಾಸಕರು ಈ ವಿಚಾರದಲ್ಲಿ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ಮಳೆಯ ಕೊರತೆಯಿಂದ ಬಿತ್ತನೆ ಮಾಡಿದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಕೆರೆಗಳಿಗೂ ನೀರು ಇಲ್ಲದಿದ್ದರೆ ಕೃಷಿ ಹಾಗೂ ಅಂತರ್ಜಲದ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ ಎಂದರು.

ತಮ್ಮ ಅವಧಿಯಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೊಳಿಸಲಾಗಿತ್ತು. ಗುರುತ್ವಾಕರ್ಷಣೆಯ ಮೂಲಕ ನೀರು ಹರಿಸುವ ವ್ಯವಸ್ಥೆಯಿಂದ ಅಂತರ್ಜಲ ಮಟ್ಟವೂ ಸುಧಾರಿಸಿತ್ತು. ಆದರೆ, ಶಾಸಕರು ಆಯ್ಕೆಯಾಗಿ ಮೂರುವರೆ ವರ್ಷ ಕಳೆದರೂ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಸಲು ಸಾಧ್ಯವಾಗಿಲ್ಲ ಎಂದು ಟೀಕಿಸಿದರು.

ಮೂರನೇ ಹಂತದ ಕೆರೆಗಳು ತುಂಬುವವರೆಗೆ ನಾಲ್ಕನೇ ಹಂತಕ್ಕೆ ನೀರು ಹರಿಸುವುದಿಲ್ಲ ಎಂದು ಉಸ್ತುವಾರಿ ಸಚಿವರು ಹೇಳಿರುವುದಾಗಿ ತಿಳಿಸಿದ ಅವರು, ಹಾಗಾದರೆ ನಾಲ್ಕನೇ ಹಂತದ ಕೆರೆಗಳಿಗೆ ನೀರು ಯಾವಾಗ ಹರಿಸಲಾಗುತ್ತದೆ ಎಂಬುದನ್ನು ಸರ್ಕಾರ ಹಾಗೂ ಶಾಸಕರು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು. ರೈತರಿಗೆ ದಿನಾಂಕ ಹಾಗೂ ಸ್ಪಷ್ಟ ಮಾಹಿತಿ ನೀಡುವ ಬದಲು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಆರೋಪಿಸುವುದು ಸರಿಯಲ್ಲ ಎಂದರು.

ಬರ ಪರಿಸ್ಥಿತಿಯಿಂದ ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಕುಸಿದಿದ್ದು, ಸಾಲ ಮಾಡಿ ಬಿತ್ತನೆ ಬೀಜ ಹಾಗೂ ಕೃಷಿ ಪರಿಕರಗಳನ್ನು ಖರೀದಿಸಿರುವ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಕಲ್ಲಿಗೌಡನಹಳ್ಳಿಯ ರೈತ ಮಣಿಕಂಠ ಆತ್ಮಹತ್ಯೆ ಮಾಡಿಕೊಂಡಿರುವುದು ರೈತರ ಸಂಕಷ್ಟದ ಗಂಭೀರತೆಯನ್ನು ತೋರಿಸುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ತಾಲ್ಲೂಕು ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಜಿಲ್ಲಾ ಉಪಾಧ್ಯಕ್ಷ ಕಣ್ಣೇಗಾಲ ಸ್ವಾಮಿ (ಮಾದಪ್ಪ), ಪುರಸಭೆ ಮಾಜಿ ಅಧ್ಯಕ್ಷ ಜಿಡಿಎಲ್ ಸುರೇಶ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಡಾ.ನವೀನ್ ಮೌರ್ಯ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನಾಗೇಂದ್ರ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಶೆಟ್ಟಹಳ್ಳಿ ವೀರಪ್ಪ, ಮಾಜಿ ಪುರಸಭಾ ಸದಸ್ಯ ನಾಗೇಶ್, ಹಿರಿಯ ಮುಖಂಡ ಅಗತಗೌಡನಹಳ್ಳಿ ಬಸವರಾಜು, ಜಿಲ್ಲಾ ಸಾಮಾಜಿಕ ಜಾಲತಾಣ ಐಟಿ ಸಂಚಾಲಕ ನಮೋ ಮಂಜು ಶಿವಪುರ, ಹುಂಡೀಪುರ ಯೋಗೇಶ್, ಶಿಂಡನಪುರ ಮಂಜುನಾಥ್, ವೆಂಕಟೇಶ್ ನೆಂಜಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಸಹಕಾರ ಬ್ಯಾಂಕ್ ಅಕ್ರಮ ತನಿಖೆಗೆ ಆಗ್ರಹ

ಹುಂಡೀಪುರ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ ಮೃತಪಟ್ಟವರ ಹೆಸರಿನಲ್ಲಿಯೂ ಸಾಲ ಪಡೆದಿರುವ ಆರೋಪಗಳು ಕೇಳಿಬಂದಿದ್ದು, ಬ್ಯಾಂಕ್‌ನ ವ್ಯವಸ್ಥಾಪಕ ಹಾಗೂ ಮೇಲ್ವಿಚಾರಕರು ಅಕ್ರಮದಲ್ಲಿ ಭಾಗಿಯಾಗಿರುವ ಆರೋಪವಿದೆ. ದೂರು ಬಂದ ಬಳಿಕ ಇಬ್ಬರನ್ನು ಅಮಾನತುಗೊಳಿಸಲಾಗಿದೆ. ಆದರೆ ಪ್ರಕರಣವನ್ನು ಕೇವಲ ಇಬ್ಬರು ಅಥವಾ ಮೂವರು ಸಿಬ್ಬಂದಿಯ ತಪ್ಪಿಗೆ ಸೀಮಿತಗೊಳಿಸದೆ, ಅಕ್ರಮದಲ್ಲಿ ಭಾಗಿಯಾಗಿರುವ ಎಲ್ಲರ ವಿರುದ್ಧ ಎಫ್‌ಐಆರ್ ದಾಖಲಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಸಹಕಾರ ಕ್ಷೇತ್ರದ ಬಗ್ಗೆ ಸಮರ್ಪಕ ಅರಿವಿಲ್ಲದವರು ನಿರ್ದೇಶಕರಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದು, ಬ್ಯಾಂಕ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಕುರಿತು ನಿರ್ದೇಶಕರು ಗಂಭೀರವಾಗಿ ಚರ್ಚಿಸಿ ರೈತರ ಹಿತ ಕಾಪಾಡಬೇಕಿತ್ತು. ಈ ವಿಚಾರದಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳಲಾಗಿಲ್ಲ ಎಂದು ಶಾಸಕರ ವಿರುದ್ಧ ಆರೋಪಿಸಿದರು.

### ಖನಿಜ ಸಾಗಣೆಗೂ ಕಡಿವಾಣ ಹಾಕಲಿ

ಕ್ಷೇತ್ರದ ಖನಿಜ ಸಂಪತ್ತು ಕೇರಳದತ್ತ ಸಾಗುತ್ತಿದೆ. ನಿತ್ಯ ನೂರಾರು ಟಿಪ್ಪರ್‌ಗಳು ಕೇರಳಕ್ಕೆ ತೆರಳುತ್ತಿವೆ ಎಂಬ ಆರೋಪಗಳು ಕೇಳಿಬರುತ್ತಿದ್ದು, ಈ ಬಗ್ಗೆ ಹಲವು ಹೋರಾಟಗಳು ನಡೆದಿದ್ದರೂ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಹೇಳಿದರು. ಖನಿಜ ಸಾಗಣೆಯ ಕುರಿತು ಸಮಗ್ರ ತನಿಖೆ ನಡೆಸಿ, ಅಕ್ರಮವಿದ್ದರೆ ತಡೆಗಟ್ಟಬೇಕು ಎಂದು ಆಗ್ರಹಿಸಿದರು. ರೈತರು ಮತ್ತು ಅರಣ್ಯ ಇಲಾಖೆ ನಡುವಿನ ಸಂಘರ್ಷದಂತಹ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ಕಲ್ಪಿಸಬೇಕು. ಕ್ಷೇತ್ರದ ಅಧಿಕಾರಿಗಳು ಮನಬಂದಂತೆ ವರ್ತಿಸುತ್ತಿರುವುದರಿಂದ ಜನಸಾಮಾನ್ಯರ ಸಮಸ್ಯೆಗಳು ಮತ್ತಷ್ಟು ಬಿಗಡಾಯಿಸುತ್ತಿವೆ. ಪೊಲೀಸ್ ಇಲಾಖೆಯ ಕಾರ್ಯವೈಖರಿಯ ಬಗ್ಗೆಯೂ ಸಾರ್ವಜನಿಕರಲ್ಲಿ ಅಸಮಾಧಾನವಿದೆ ಎಂದು ಟೀಕಿಸಿದರು. ಕ್ಷೇತ್ರದಲ್ಲಿ ಜನಸಾಮಾನ್ಯರು ಹಾಗೂ ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ಕೆರೆಗಳಿಗೆ ನೀರು ತುಂಬಿಸುವುದು ಸೇರಿದಂತೆ ಮೂಲಭೂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಜನರು ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

# ಕನಿಷ್ಠ ಬರ ಪರಿಹಾರ ಘೋಷಣೆಗೆ ರೈತಸಂಘ ಆಕ್ರೋಶ

**ಗುಂಡ್ಲುಪೇಟೆ:** ರಾಜ್ಯ ಸರ್ಕಾರ ಬರ ಪರಿಹಾರವಾಗಿ ಪ್ರತಿ ರೈತರಿಗೆ ಕೇವಲ 2,500 ಘೋಷಿಸಿರುವುದನ್ನು ವಿರೋಧಿಸಿ ರೈತ ಸಂಘದ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಹಳೆ ಪ್ರವಾಸಿ ಮಂದಿರದಿಂದ ಮೆರವಣಿಗೆ ಮೂಲಕ ಹೊರಟ ರೈತರು ಬಸವೇಶ್ವರ ವೃತ್ತದ ಬಳಿ ರಸ್ತೆ ತಡೆ ನಡೆಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಮುಖಂಡ ಶಿವಪುರ ಮಹದೇವಪ್ಪ ಮಾತನಾಡಿ, ರೈತರಿಗೆ ಸರ್ಕಾರ ಪರಿಹಾರದ ಹೆಸರಿನಲ್ಲಿ 2,500 ನೀಡಿರುವುದು ಅವಮಾನಕರವಾಗಿದೆ. ಪ್ರತಿ ರೈತರಿಗೆ ಕನಿಷ್ಠ 50 ಸಾವಿರ ಬರ ಪರಿಹಾರ ನೀಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಒಂದು ಎಕರೆ ಜಮೀನಿನಲ್ಲಿ ಉಳುಮೆ, ಬಿತ್ತನೆ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ರೈತರು ಸಾವಿರಾರು ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಒಂದು ಮೂಟೆ ಗೊಬ್ಬರವೇ ಸುಮಾರು ?2,500 ಇದ್ದು, ಬಿತ್ತನೆ ಬೀಜ ಸೇರಿದಂತೆ ಕೃಷಿ ವೆಚ್ಚವೂ ಹೆಚ್ಚಾಗಿದೆ. ಈ ವಾಸ್ತವಾಂಶಗಳನ್ನು ಪರಿಗಣಿಸಿ ಸರ್ಕಾರ ಸಮರ್ಪಕ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.



ಪ್ರತಿಭಟನೆಯಲ್ಲಿ ರೈತಸಂಘದ ಪದಾಧಿಕಾರಿಗಳಾದ ಪ್ರವೀಣ್, ಮಹದೇವಪ್ರಸಾದ್, ಸೋಮಶೇಖರ್, ಶಿವಕುಮಾರ್, ಚಂದ್ರು, ಸಾಗರ್, ಮನು ಸೇರಿದಂತೆ ಭಾಗವಹಿಸಿದ್ದರು.

# ಆಪರೇಷನ್ ಟೈಗರ್: ರೈತನನ್ನು ಬಲಿ ಪಡೆದಿದ್ದ ಹುಲಿ ಸೆರೆ

**ಚಾಮರಾಜನಗರ:** ರೈತನ ಮೇಲೆ ದಾಳಿ ಮಾಡಿ ಕೊಂದು ತಿಂದಿದ್ದ ಹುಲಿಯನ್ನು ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಕೊನೆಗೂ ಸೆರೆ ಹಿಡಿದಿದ್ದು, ಹಲವು ಗ್ರಾಮಗಳ ರೈತರು, ಜನರು ನಿರಾಳರಾಗಿದ್ದಾರೆ.

ಚಾಮರಾಜನಗರ ತಾಲೂಕಿನ ಬಡಗಲಪುರದಲ್ಲಿ ರೈತ ಬಸವಣ್ಣ ಮೇಲೆ ದಾಳಿ ಮಾಡಿ ಭಕ್ಷಿಸಿದ್ದ ಹುಲಿಯನ್ನು ಚಾಮರಾಜನಗರ ತಾಲೂಕಿನ ತಾವರೆಕಟ್ಟೆ ಮೋಳೆ ಗ್ರಾಮದ ಮರಗದಕೆರೆ ಬಳಿ ಶನಿವಾರ ಬೆಳಗ್ಗೆ ಸಾಕಾನೆಗಳಾದ ಕಂಜನ್ ಮತ್ತು ಈಶ್ವರ್ ಸಹಾಯದಿಂದ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಗಿದೆ. ಸೆರೆ ಹಿಡಿದ ವ್ಯಾಘ್ರವು ಗಂಡಾಗಿದ್ದು, 6 ರಿಂದ 7 ವರ್ಷದ್ದು ಎಂದು ಅಂದಾಜು ಮಾಡಲಾಗಿದೆ.

ಎರಡು ಡ್ರೋನ್?, ಶ್ವಾನದಳ ಮತ್ತು ಹುಲಿ ಜಾಡು ಪತ್ತೆಹಚ್ಚುವ ನುರಿತ ಗಿರಿಜನರು ಸೇರಿದಂತೆ 65ಕ್ಕೂ ಅಧಿಕ ಮಂದಿ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು

ಕಳೆದ 14ರ ಸಂಜೆ ಚಾಮರಾಜನಗರ ತಾಲೂಕಿನ ಬಡಗಲಪುರ ಗ್ರಾಮದ ಜಮೀನಿನಲ್ಲಿ ಹುಲಿ ದಾಳಿಗೆ ರೈತ ಬಸವಣ್ಣ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಆರ್??ಟಿ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಿಬ್ಬಂದಿ ಸೆ. 15 ರಿಂದಲೂ ಹುಲಿ ಸೆರೆ ಕಾರ್ಯಾಚರಣೆ ನಡೆಸಲಾಗುತ್ತಿತ್ತು.

ಡ್ರೋನ್?? ಹಾಗೂ ಥರ್ಮಲ್ ಡ್ರೋನ್?, ಶ್ವಾನದಳದ ಮೂಲಕ ಕಾರ್ಯಾಚರಣೆ ನಡೆಸಿದರೂ ಹುಲಿ ಸುಳಿವು ಸಿಕ್ಕಿರಲಿಲ್ಲ. ಹುಲಿ ಸೆರೆಗಾಗಿ ದುಬಾರೆಯಿಂದ ಕಂಜನ್ ಮತ್ತು ಈಶ್ವರ್ ಎಂಬ ಸಾಕಾನೆಗಳನ್ನು ಕರೆತರಲಾಗಿತ್ತು. ಕಳೆದ ಗುರುವಾರದಂದು ಚಾಮರಾಜನಗರ ತಾಲೂಕಿನ ತಾವರೆಕಟ್ಟೆ ಮೋಳೆ ಸುತ್ತಮುತ್ತಲು ಹುಲಿ ಕಾಣಿಸಿಕೊಂಡ ಭೀತಿ ಸೃಷ್ಟಿಯಾಗಿತ್ತು.

ತಾವರುಕಟ್ಟೆ ಮೋಳೆ ಗ್ರಾಮದ ಆಸುಪಾಸಿನಲ್ಲೇ ಹುಲಿ ಓಡಾಟ ನಡೆಸಿದ್ದ ಮಾಹಿತಿ ಮೇರೆಗೆ ಬಿಆರ್?ಟಿ ಅರಣ್ಯಾಧಿಕಾರಿಗಳು ದೌಡಾಯಿಸಿ ಡ್ರೋನ್? ಕ್ಯಾಮರಾದ ಮೂಲಕ ಹುಲಿ ಮೇಲೆ ನಿಗಾ ಇರಿಸಿ ಕಾರ್ಯಾಚರಣೆ ನಡೆಸಿದ್ದರು.



**ವಿಶ್ವಕರ್ಮ ಜಯಂತಿ, ಕೈಕುಸುರಿ ಕಲೆಯ ಮಹತ್ವ**

# ವಿಶ್ವಕರ್ಮರ ಮೂಲ ಕಲಾವೃತ್ತಿಯೇ ಶ್ರೇಷ್ಠ: ಗಣೇಶ್ ಪ್ರಸಾದ್

ಚಾಮರಾಜನಗರ: ತಂತ್ರಜ್ಞಾನ ಎಷ್ಟು ಮುಂದಿದ್ದರೂ, ಇಡೀ ಜಗತ್ತು ಕಂಪ್ಯೂಟರೀಕರಣಗೊಳ್ಳುತ್ತಿದ್ದರೂ ವಿಶ್ವಕರ್ಮರ ಮೂಲ ಕೈಕುಸುರಿ ಕಲಾವೃತ್ತಿಯೇ ಅತ್ಯಂತ ಶ್ರೇಷ್ಠ ಎಂದು ಗುಂಡ್ಲುಪೇಟೆ ಶಾಸಕ ಎಚ್. ಎಂ. ಗಣೇಶ್ ಪ್ರಸಾದ್ ಹೇಳಿದರು.

ನಗರದ ವರನಟ ಡಾ. ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಂಸ್ಕೃತಿ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಇಲಾಖೆಯು ಕಾರ್ಯನಿರ್ವಹಿಸುತ್ತಿದೆ 'ಶ್ರೀ ವಿಶ್ವಕರ್ಮ ಜಯಂತಿ' ಕಾರ್ಯಕ್ರಮವನ್ನು ಉದ್ದೇಶಿಸಿ ಅವರಿದ್ದಾರೆ. ಜಗತ್ತು ಸಮರ್ಥವಾಗಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ, ವಿಶ್ವಕರ್ಮರ ವೃತ್ತಿಗೆ ತನ್ನದೇ ಆದ ಮೌಲ್ಯಯುತ ಮಹತ್ವವಿದೆ. ವಿಶ್ವಕರ್ಮರು ಎಲ್ಲಾ ವರ್ಗ ಮತ್ತು ಸಮುದಾಯಗಳಿಗೆ ಅಗತ್ಯವಾಗಿದ್ದಾರೆ. ವಿಶ್ವ ನಿರ್ಮಾಣ ಮಾಡುವ ಮನೆ, ದೇವಾಲಯಗಳಿಗೆ ಕರ್ಮರ ಕಲಾ ಕೈಕುಸುರಿ ಕೆಲಸ ಬೇಕೇಬೇಕು ಎಂದು ಅವರು ಬಣ್ಣಿಸಿದರು.

**ಸಮುದಾಯ ಭವನ ನಿರ್ಮಾಣ ಹಾಗೂ ಸೌಲಭ್ಯಗಳ ಸದ್ಬಳಕೆ**




ವಿಶ್ವಕರ್ಮ ಸಮುದಾಯಕ್ಕೆ ನಿಗಮ ಸ್ಥಾಪನೆ ಮೂಲಕ ಸರ್ಕಾರವು ಅಗತ್ಯ ನೆರವು ಕಲ್ಪಿಸುವುದು, ಶಿಕ್ಷಣ ಸೇರಿದಂತೆ ಸರ್ಕಾರದ ಸೌಲಭ್ಯಗಳು ಸಮು ದಾಯವು ಸದುಪಯೋಗ ಮಾಡಿಕೊಳ್ಳಬೇಕು ಎಂದು ಶಾಸಕರು ಕರೆ ಮಾಡಿದ್ದಾರೆ. ಸಮುದಾಯಕ್ಕೆ ಸಮುದಾಯ ಭವನದ ಅಗತ್ಯವಿದ್ದು, ಗುಂಡ್ಲುಪೇಟೆ ಪುರಸಭಾ ಸ್ಥಳವನ್ನು ಗುರುತಿಸಲು ಅಧಿಕಾರಿಗಳಿಗೆ ಸೂಚಿಸಿ ಸೂಚಿಸಲಾಗಿದೆ. ಅದೇ ರೀತಿ, ಜಿಲ್ಲಾ ಕೇಂದ್ರದ ಸಮುದಾಯ ಭವನಕ್ಕಾಗಿ ಚಾಮರಾಜ ನಗರ ತಾಲೂಕಿನ ಮಾದಾಪುರದಲ್ಲಿ ಜಾಗ ನೀಡಲಾ ಗಿದ್ದ ಸರ್ಕಾರ, ಭವನ ನಿರ್ಮಾಣಕ್ಕೂ ಅಗತ್ಯ ಅನುದಾನ ನೀಡಲಾಗುವುದು ಎಂದು ಎಚ್. ಎಂ. ಗಣೇಶ್ ಪ್ರಸಾದ್ ಭರವಸೆ.

**ವಿಶ್ವಕರ್ಮರು: ಹಕ್ಕುಗಳಿಗಾಗಿ ಆಗ್ರಹ**

ಕಾರ್ಯಕ್ರಮದಲ್ಲಿ ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಕಾಡಾ) ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಜಗತ್ತಿನ ಸೃಷ್ಟಿಕರ್ತ ವಿಶ್ವಕರ್ಮ ಆಗಿದ್ದಾರೆ. ಚಿನ್ನದ ಕೆಲಸ, ಮರಗೆಲಸ, ಕಬ್ಬಿಣದ ಕೆಲಸ, ಶಿಲ್ಪಕಲೆ ಸೇರಿದಂತೆ ಐದು ಬಗೆಯ ವೃತ್ತಿ ಮಾಡುವವರು ಈ ಸಮುದಾಯಕ್ಕೆ ಸೇರಿದವರಾಗಿದ್ದರೆ, ನಾವೆಲ್ಲರೂ ನೆಮ್ಮದಿಯ ಜೀವನ ನಡೆಸಲು ವಿಶ್ವಕರ್ಮರ ಸಹಕಾರ ಬೇಕು ಎಂದರು.

ಮುಖ್ಯ ಭಾಷಣ ಮಾಡಿದ ಕರ್ನಾಟಕ ಪ್ರದೇಶ ವಿಶ್ವಕರ್ಮರ ಮಹಾಸಂಘದ ರಾಜ್ಯಾಧ್ಯಕ್ಷ ಆರ್. ಶ್ರೀನಿವಾಸಾಚಾರ್, ಬ್ರಹ್ಮಾಂಡದ ಸೃಷ್ಟಿಕರ್ತ ವಿಶ್ವಕರ್ಮರು ಮಾತನಾಡುವ ಮೊದಲ ಎಂದರೆ ತಪ್ಪಾಗಲಾರದು. ಶ್ರೀಕೃಷ್ಣನ ದ್ವಾರಕಾ ನಗರ, ರಾವಣನ ಲಂಕಾ ನಗರ, ಪಾಂಡವರ ಇಂದ್ರಪ್ರಸ್ಥ, ಬಿಲ್ಲು, ಬಾಣ, ಕತ್ತಿ, ಗುರಾಣಿ ಸೇರಿದಂತೆ ಎಲ್ಲವೂ ಕುಶಲಕರ್ಮಿ ವಿಶ್ವಕರ್ಮರ ಕೊಡುಗೆಗಳೇ ಆಗಿವೆ. ದೇವಾನುದೇವತೆಗಳನ್ನು ಜಗತ್ತಿಗೆ ಪರಿಚಯಿಸಿದ ವಿಶ್ವಕರ್ಮರು ಭಾರತೀಯ ಸಂಸ್ಕೃತಿಯ ಪ್ರತೀಕವಾ ಗಿದ್ದು, ಬೇಲೂರು, ಹಳೇಬೀಡು, ಐಹೊಳೆ, ಪಟ್ಟದಕಲ್ಲು ಹಾಗೂ ಸೋಮನಾಥಪುರದಲ್ಲಿ ನಮ್ಮ ಸಂಸ್ಕೃತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಸಂವಿ ಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಸಮುದಾಯದ ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಸಂಘಟಿತರಾಗಬೇಕು. ಸರ್ಕಾರ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ, ಸಮುದಾಯಕ್ಕೆ ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಪ್ರಾತಿನಿಧ್ಯ ನೀಡಲಾಗಿದೆ ಮತ್ತು ಎಲ್ಲಾ ತಾಲೂಕುಗಳಲ್ಲಿ ಸಮುದಾಯ ಭವನಗಳನ್ನು ನಿರ್ಮಿಸಬೇಕು ಎಂದು ಅವರು ಒತ್ತಾಯಿಸಿದರು. ನಗರದ ಪ್ರವಾಸಿಮಂದಿರದಿಂದ ಶ್ರೀ ವಿಶ್ವಕರ್ಮರ ಭಾವಚಿತ್ರದ ಮೆರವಣಿಗೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಮಾಡಲಾಗಿದೆ. ಈ ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಭವನದಲ್ಲಿ ಅಂತ್ಯಗೊಂ ಡಿತು. ಈ ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಕೆ.ಎನ್. ಮಂಜುನಾಥ್, ಸಮುದಾಯದ ಮುಖಂಡರಾದ ಅನಂತಕುಮಾರ್, ಹೊನ್ನಹಳ್ಳಿ ಮಹೇಶ್, ಕುಮಾರ್, ಹರದನಹಳ್ಳಿ ಸುರೇಶ್, ಗಿರೀಶ್ ಸೇರಿದಂತೆ ಇತರರು ಇದ್ದರು.

## 416 ವರ್ಷಗಳ ಇತಿಹಾಸದ ಶ್ರೀರಂಗಪಟ್ಟಣ ದಸರಾ ಅ. 15 ರಿಂದ 18 ರವರೆಗೆ:ಲಾಂಛನ ಬಿಡುಗಡೆ

# ಅ. 11 ರಂದು ಮುಖ್ಯಮಂತ್ರಿಗಳಿಂದ ಕಾವೇರಿ ಆರತಿ ಉದ್ಘಾಟನೆ



**ಮಂಡ್ಯ:** ಶ್ರೀರಂಗಪಟ್ಟಣ ದಸರಾ ಮಹೋತ್ಸವವನ್ನು ಅ.15 ರಿಂದ ಅ. 18 ರವರೆಗೆ ನಾಲ್ಕು ದಿನಗಳ ಕಾಲ ಆಚರಿಸಲು ನಿರ್ಧರಿಸಲಾಗಿದೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಹಾಗೂ ಜಲಸಂಪನ್ಮೂಲ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ದಸರಾ ಲಾಂಛನ ಬಿಡುಗಡೆ ಮಾಡಿದ ನಂತರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಸಚಿವರು, ಪ್ರಥಮ ಬಾರಿಗೆ ಶ್ರೀರಂಗಪಟ್ಟಣದಲ್ಲಿ ಪ್ರಾರಂಭವಾದ ಮೈಸೂರು ದಸರಾ ಆಚರಣೆಗೆ ಮುನ್ನುಡಿ ಬರೆದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ದಸರಾ ಮಹೋತ್ಸವ ಆಚರಣೆಯು 416 ವರ್ಷಗಳ ಇತಿಹಾಸವನ್ನು ಹೊಂದಿರುತ್ತದೆ ಎಂದು ತಿಳಿಸಿದರು.

ಪ್ರತೀ ಬಾರಿಯಂತೆ ಈ ವರ್ಷವೂ ಶ್ರೀರಂಗಪಟ್ಟಣ ದಸರಾ ಆಚರಣೆಯನ್ನು ಸಂಪ್ರದಾಯದಂತೆ ಸಂಭ್ರಮದಿಂದ, ಮಂಡ್ಯ ಜಿಲ್ಲಾಡಳಿತ ಮತ್ತು ಸಾರ್ವಜನಿಕರ ಸಹಕಾರದಿಂದ ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಅ. 15 ರಂದು ಕಿರಂಗೂರು ಗ್ರಾಮದ ಬನ್ನಿ ಮಂಟಪದಿಂದ ಮಧ್ಯಾಹ್ನ 3 ಗಂಟೆಗೆ ಪುಷ್ಪಾರ್ಚನೆಯ ಮೂಲಕ ದಸರಾ ಮಹೋತ್ಸವವು ಉದ್ಘಾಟನೆಗೊಂಡು ತಾಯಿ ಚಾಮುಂಡೇಶ್ವರಿ ದೇವಿಯ ಮೆರವಣಿಗೆಯು ವೈಭವಯುತ ಜಂಬೂ ಸವಾರಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಮೂಲಕ ರಂಗನಾಥಸ್ವಾಮಿ ದೇವಾಲಯದ ಮೈದಾನ ತಲುಪುತ್ತದೆ ಎಂದು ತಿಳಿಸಿದರು.

ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಉದ್ಘಾಟಕರನ್ನಾಗಿ ಖ್ಯಾತ ಚಲನಚಿತ್ರ ನಟರು, ನಿರ್ದೇಶಕರು ಹಾಗೂ ಸಂಗೀತ ನಿರ್ದೇಶಕರಾದ ಡಾ.ವಿ. ರವಿಚಂದ್ರನ್, ಅವರನ್ನು ಆಯ್ಕೆ ಮಾಡಿ, ಜಿಲ್ಲಾಡಳಿತದ ವತಿಯಿಂದ ಈಗಾಗಲೇ ಆಮಂತ್ರಿಸಲಾಗಿರುತ್ತದೆ ಅ. 15 ರಿಂದ ಅ. 18 ರವರೆಗೆ ಶ್ರೀರಂಗ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.ಅ. 18 ರಂದು ಶ್ರೀರಂಗಪಟ್ಟಣ ದಸರಾ ಮಹೋತ್ಸವ ಸಮಾರೋಪಗೊಳ್ಳುತ್ತದೆ ಎಂದರು.

**ಪ್ರಥಮ ಬಾರಿಗೆ "ಯುವಸಂಭ್ರಮ:** ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ರಮೇಶ್ ಬಾಬು ಬಂಡಿಸಿದ್ದೇಗೌಡ ಮಾತನಾಡಿ ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಆಚರಣೆಯ ಭಾಗವಾಗಿ ಮಂಡ್ಯ ಜಿಲ್ಲೆಯ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಕಲಾಪ್ರದರ್ಶನಕ್ಕೆ ವೇದಿಕೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಇದೇ ಪ್ರಥಮ ಬಾರಿಗೆ "ಯುವಸಂಭ್ರಮ" ಕಾರ್ಯಕ್ರಮವನ್ನು ಅ. 12 ರಿಂದ ಅ. 13 ರವರೆಗೆ ಶ್ರೀರಂಗಪಟ್ಟಣ ತಾಲೂಕು ಕ್ರೀಡಾಂಗಣದಲ್ಲಿ ಸಾಯಂಕಾಲ 6 ಗಂಟೆಯಿಂದ ಆಯೋಜಿಸಲು ನಿರ್ಧರಿಸಲಾಗಿರುತ್ತದೆ ಎಂದು ತಿಳಿಸಿದರು.

ಕಾವೇರಿ ಆರತಿಯು ಕರ್ನಾಟಕದ ಹೆಮ್ಮೆಯ ದೈವಿಕ ಕಾರ್ಯಕ್ರಮವಾಗಿದ್ದು, ಕಳೆದ ವರ್ಷ ಮೊದಲ ಬಾರಿಗೆ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಆರಂಭಿಸಲಾಗಿತ್ತು ಅ. 11 ರಿಂದ ಅ. 16 ರವರೆಗೆ ಒಟ್ಟು ಆರು ದಿನಗಳ ಕಾಲ ಕಾವೇರಿ ಆರತಿ ಕಾರ್ಯಕ್ರಮ ಜರುಗಲಿದ್ದು, ಅ. 11 ರಂದು ಸಾಯಂಕಾಲ ಕೆ.ಆರ್.ಎಸ್. ಡ್ಯಾಂ ಕೆಳಭಾಗದಲ್ಲಿ ಮುಖ್ಯಮಂತ್ರಿಗಳು ಕಾವೇರಿ ಆರತಿಯನ್ನು ಉದ್ಘಾಟಿಸುವರು ಮುಖ್ಯಮಂತ್ರಿಗಳಾದ ನಂತರ ಅವರು ಜಿಲ್ಲೆಗೆ ನೀಡುತ್ತಿರುವ ಮೊದಲ ಭೇಟಿ ಇದಾಗಿರುವುದರಿಂದ, ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ ಮನವಿ ಮಾಡಿದರು.

## ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

**ಮಂಡ್ಯ:** 2026 27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಾದ ಧನುಶ್ರೀ ಯೋಜನೆ (ಹೆಚ್.ಐ.ವಿ ಶಂಕಿತ ಮಹಿಳೆಯರಿಗೆ), ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ (ಟ್ರಾನ್ಸ್ ಜೆಂಡರ್ ಗಳಿಗೆ), ಚೇತನ ಯೋಜನೆ ( ದಮನಿತ ಮಹಿಳೆಯರಿಗೆ) ಹಾಗೂ ಉದ್ಯೋಗಿನಿ ಯೋಜನೆಗಳಿಗೆ ಸೇವಾ ಸಿಂಧು ಪೋರ್ಟಲ್ ನಲ್ಲಿ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಕ್ಟೋಬರ್ 31 ರ ವರಗೆ ಅವಕಾಶವಿದ್ದು ಅರ್ಜಿದಾರಾರು ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ನಲ್ಲಿ ವೆಬ್ ಸೈಟ್ https://sevasindhu.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಹಾಗೂ ಜಿಲ್ಲಾ ಅಭಿವೃದ್ಧಿ ನೀರಿಕ್ಷಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಕಛೇರಿ ಹಾಗೂ ಕಛೇರಿಯ ದೂ. ಸಂ. 9902362499 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆ.29 ರಂದು ಜೈ ಕರ್ನಾಟಕ ಪರಿಷತ್ ವತಿಯಿಂದ "ತ್ರಿವಿಧ ಸಂಭ್ರಮ" ಸಾಹಿತ್ಯಿಕ ಮಹೋತ್ಸವ

# ಕೃತಿ ಲೋಕಾರ್ಪಣೆ-ಕವಿಗೋಷ್ಠಿ-ಅಂತರ್ಜಾಲ ಲೋಕಾರ್ಪಣೆ



**ಮಂಡ್ಯ:** ಜೈ ಕರ್ನಾಟಕ ಪರಿಷತ್ ವತಿಯಿಂದ ಸೆಪ್ಟೆಂಬರ್ 29 ರ ಮಂಗಳವಾರ ಮಂಡ್ಯದ ಗಾಂಧಿಭವನದಲ್ಲಿ "ತ್ರಿವಿಧ ಸಂಭ್ರಮ"ದ ಸಾಹಿತ್ಯಿಕ ಮಹೋತ್ಸವ ಏರ್ಪಡಿಸಲಾಗಿದೆ ಎಂದು ಜೈ ಕರ್ನಾಟಕ ಪರಿಷತ್ ರಾಜ್ಯಾಧ್ಯಕ್ಷ ಎಸ್.ನಾರಾಯಣ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಕಾರ್ಯಕ್ರಮವು ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ವಿಶಿಷ್ಟವಾಗಿ ಮೂಡಿಬರಲಿದ್ದು, ವೇದಿಕೆಯ ಮೇಲೆ ಕೇವಲ ಪೋಡಿಯಂ, ಬೃಹತ್ ಎಲ್.ಇ.ಡಿ ಪರದೆ ಹಾಗೂ ಸಾಂಸ್ಕೃತಿಕ ಪ್ರಸ್ತುತಿಗಳಿಗೆ ಮಾತ್ರ ಅವಕಾಶವಿರುತ್ತದೆ ಗಣ್ಯರು ಮುಂಭಾಗದ ವಿಶೇಷ ಆಸನಗಳಲ್ಲಿ ಆಸೀನರಾಗಿ ಇಡೀ ಮಹೋತ್ಸವವನ್ನು ಮುನ್ನಡೆಸಲಿದ್ದಾರೆ. ನಾಡಗೀತೆಯ ಗಾಯನದೊಂದಿಗೆ ಅದಕ್ಕೆ ಪೂರಕವಾಗಿ ಭರತನಾಟ್ಯ ನೃತ್ಯ ಪ್ರದರ್ಶನ ಜರುಗಲಿದ್ದು, ಪ್ರಕೃತಿ ಮತ್ತು ಮಾನವನ ಅಂತರಂಗವನ್ನು ಬೆಸೆಯುವ ಅಪೂರ್ವ ಕೃತಿ 'ವೃಕ್ಷಾಂತರಂಗ' ಲೋಕಾರ್ಪಣೆ ನಡೆಯಲಿದೆ ಎಂದು ತಿಳಿಸಿದರು.

**'ಪರಿಸರದವ್ವ ಕವಿಗೋಷ್ಠಿ':** ಪರಿಸರಮಾತೆ ಸಾಲುಮರದ ತಿಮ್ಮಕ್ಕನವರ ಸ್ಮರಣೆಯ 'ಪರಿಸರದವ್ವ ಕವಿಗೋಷ್ಠಿ' ಸಂಜೆ 3.30 ಗಂಟೆಗೆ ನಡೆಯಲಿದ್ದು, ಕವಿಗಳಾದ ಸಬ್ಬನಹಳ್ಳಿ ಶಶಿಧರ, ದೊ.ಚಿ. ಗೌಡ, ರೋಷನ್ ಚೋಪ್ರಾ, ಲೋಕೇಶ್ ಕಲ್ಕುಣಿ, ಅಪ್ಪಾಜಿ ಶ್ರೀರಂಗಪಟ್ಟಣ, ಜಯರಾಮು, ಬಸವರಾಜು ಜಯಪುರ, ಸದ್ದಾಂ ತಗ್ಗಹಳ್ಳಿ, ರೇಖಾ ಉಪ್ಪಾರ್ ಹಳುವಾಡಿ, ಕುಶಾಲ್, ಪುನೀತ್ ಭಾಸ್ಕರ್, ಮಹೇಶ್ ಕಾಗೆಹಳ್ಳದ ದೊಡ್ಡಿ ಹಾಗೂ ಕವಯಿತ್ರಿಯರಾದ ಮಂಜುಳ ಸಬ್ಬನಹಳ್ಳಿ, ಅಭಿಜ್ಞಾ ಪಿ. ಗೌಡ, ಸತ್ಯವತಿ ಮದ್ದೂರು, ನಗುಗೌಡ ಕಡಿಲುವಾಗಿಲು ಅವರು ಕಾವ್ಯ ವಾಚನ ಮಾಡಲಿದ್ದಾರೆ ಎಂದು ತಿಳಿಸಿದರು.

ಸಮಾರಂಭದ ಉದ್ಘಾಟನೆ ಹಾಗೂ ದಿವ್ಯ ಸಾನ್ನಿಧ್ಯ ಮತ್ತು ಆಶೀರ್ವಚನವನ್ನು ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ನೀಡಲಿದ್ದಾರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಕೃತಿ ಬಿಡುಗಡೆ ಮಾಡಲಿದ್ದಾರೆ ಮಂಡ್ಯ ವಿಧಾನ ಸಭಾ ಕ್ಷೇತ್ರದ ಶಾಸಕರಾದ ರವಿಕುಮಾರ್ ಗಣಿಗ ಅವರು ಉದ್ಘಾಟಿಸಲಿದ್ದಾರೆ ಪದ್ಮಶ್ರೀ ಪುರಸ್ಕೃತರು, ಪುಸ್ತಕದ ಮನೆ, ಎಂ.ಅಂಕೇಗೌಡ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ತ್ರಿವರ್ಣ ಫೌಂಡೇಶನ್ ಸಂಸ್ಥಾಪಕ ಕಲಾರತ್ನ ಪೊಟ್ಲೂರಿ ಹರಿಕೃಷ್ಣ ಅವರು ವೆಬ್‌ಸೈಟ್ ಲೋಕಾರ್ಪಣೆ ಮಾಡಲಿದ್ದಾರೆ ಜಿಲ್ಲಾಧಿಕಾರಿ ಡಾ. ಕುಮಾರ್ ಕೃತಿಯ ಕುರಿತು ವಿಶೇಷ ನುಡಿಗಳನ್ನಾಡಲಿದ್ದಾರೆ.ಜಿಪಂ ಸಿಇಒ ಕೆ.ಆರ್. ನಂದಿನಿ ಕವಿಗಳಿಗೆ ಪ್ರಶಸ್ತಿ ವಿತರಣೆ ಮಾಡಲಿದ್ದಾರೆ. ಖ್ಯಾತ ಸಾಹಿತಿ ಡಾ.ಪ್ರದೀಪ್ ಕುಮಾರ್ ಹೆಬ್ರಿ ಅವರು ಆಶಯ ನುಡಿಗಳನ್ನಾಡಲಿದ್ದಾರೆ ಹಿರಿಯ ಸಾಹಿತಿ, ತೈಲೂರು ವೆಂಕಟಕೃಷ್ಣ ಅವರು ಪುಸ್ತಕ ಕುರಿತು ಮಾತನಾಡಲಿದ್ದಾರೆ

ಮಂಡ್ಯ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಡಾ.ಹೆಚ್.ಎಸ್.ಮುದ್ದೇಗೌಡ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಎಂ.ವಿ.ಧರಣೇಂದ್ರಯ್ಯ, ಜಯಪ್ರಕಾಶಗೌಡ,ಮೀರಾ ಶಿವಲಿಂಗಯ್ಯ, ಡಿ.ಪಿ.ಸ್ವಾಮಿ, ಜಿ. ಟಿ. ವೀರಪ್ಪ, ಪತ್ರಕರ್ತ ಹೊಳಲು ಶ್ರೀಧರ್, ನಿವೃತ್ತ ಎಲ್‌ಐಸಿ ಅಭಿವೃದ್ಧಿ ಅಧಿಕಾರಿ ಡಾ.ಎಸ್.ಶ್ರೀನಿವಾಸ ಶೆಟ್ಟಿ ಅವರು ಭಾಗವಹಿಸಲಿದ್ದಾರೆ.ಗೌರವಾನ್ವಿತ ಅತಿಥಿಗಳಾಗಿ ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯ ಆನಂದ್, ಜೆಡಿಎಸ್ ಮುಖಂಡರಾದ ಬಿ.ಆರ್. ರಾಮಚಂದ್ರು, ಬಿಜೆಪಿ ಮುಖಂಡರಾದ ಅಶೋಕ್ ಜಯರಾಂ ಅವರು ಭಾಗವಹಿಸಲಿದ್ದಾರೆ

ವಿಶೇಷ ಆಹ್ವಾನಿತರಾಗಿ ಜೈ ಕರ್ನಾಟಕ ಪರಿಷತ್ತಿನ ರಾಜ್ಯ ಕಾರ್ಯಾಧ್ಯಕ್ಷ, ತುಮಕೂರಿನ ಡಾ. ಸುದೀಪ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಜಗದೀಶ್ ಗೌಡ, ಕು. ಕನ್ನಿಕಾ ಹೆಚ್.ಆರ್, ಎಂ.ಜಿ. ಯೋಗೇಶ್, ಡಿ. ನಾಗೇಶ್, ವಿಶಾಲ್ ರಘು, ಹೆಚ್. ಎಲ್.ವಿನಯ್ ಕುಮಾರ್, ಎಂ.ಆರ್.ಮಂಜು,ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ರಾಘವೇಂದ್ರ, ಸತೀಶ್ ಜವರೇಗೌಡ, ಲಂಕೇಶ್, ಜೆ.ಬಸವರಾಜ್ ಅವರು ಭಾಗವಹಿಸಲಿದ್ದಾರೆ

ಈ ಅಪೂರ್ವ ತ್ರಿವಿಧ ಸಾಂಸ್ಕೃತಿಕ ಹಬ್ಬಕ್ಕೆ ಆಗಮಿಸಬೇಕೆಂದು ಎಸ್. ನಾರಾಯಣ್ ಕೋರಿದರು.

ಪತ್ರಿಕಾಗೋಷ್ಠಿಯಲ್ಲಿ ಪರಿಷತ್ತಿನ ರಾಜ್ಯ ಉಪಾಧ್ಯಕ್ಷ ಡಿ.ನಾಗೇಶ್, ಜೆ.ಬಸವರಾಜು, ಶಾಖಾಧ್ಯಕ್ಷರಾದ ಪುಟ್ಟಸ್ವಾಮಿ, ರಾಜೇಶ್, ಮಂಚಶೆಟ್ಟಿ ಎಂ. ಕಡಿಲುವಾಗಿಲು ಅವರು ಉಪಸ್ಥಿತರಿದ್ದರು.

# ಸಾಲ ಮರುಪಾವತಿ ಮೂಲಕ ಸಂಘದ ಬೆಳವಣಿಗೆಗೆ ಕೈಜೋಡಿಸಿ: ಶ್ಯಾಮಸುಂದರ್



**ಕೆ.ಆರ್.ನಗರ:** ಸಹಕಾರ ಸಂಘಗಳಿಂದ ಸಾಲವನ್ನು ಪಡೆದಂತವರು ಸಕಾಲದಲ್ಲಿ ಸಾಲ ಮರುಪಾವತಿ ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಕೈಜೋಡಿಸಬೇಕೆಂದು ಪಟ್ಟಣದ ಗ್ರಾಮೀಣ ನಿಧಿ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಅಧ್ಯಕ್ಷ ಕೆ.ಆರ್.ಶ್ಯಾಮಸುಂದರ್ ಹೇಳಿದರು.

ಅವರು ಸಾಲಿಗ್ರಾಮ ಪಟ್ಟಣದ ಸೊಸೈಟಿಯಲ್ಲಿ ನಡೆದ 2025 – 26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಂಘದ ಸದಸ್ಯರುಗಳು ಸೊಸೈಟಿಯಿಂದ ಪಡೆಯುವಂತಹ ಸಾಲ ಸೌಲಭ್ಯವನ್ನು ಉದ್ದೇಶಿತ ಕೆಲಸಗಳಿಗೆ ಬಳಕೆ ಮಾಡುವ ಮೂಲಕ ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಆ ಮೂಲಕ ತಾವು ಸೇರಿದಂತೆ ತಮ್ಮ ಕುಟುಂಬಗಳು ಆರ್ಥಿಕ ಅಭಿವೃದ್ಧಿಯ ಪಥದತ್ತ ಸಾಗಬೇಕು ಎಂದರು.

ಸೊಸೈಟಿಯ ಎಲ್ಲಾ ವ್ಯವಹಾರಗಳನ್ನು ಗಣಕೀಕರಣ ಮಾಡಿದ್ದು ಅತ್ಯಂತ ಪಾರದರ್ಶಕವಾಗಿ ಕಾರ್ಯ ನಿರ್ವಹಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರ ಸಹಕಾರದೊಂದಿಗೆ ಸೊಸೈಟಿಯ ಸದಸ್ಯರುಗಳಿಗೆ ಹೆಚ್ಚು ಅನುಕೂಲವಾಗುವಂತಹ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನ ಮಾಡಲು ಶ್ರಮಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸೊಸೈಟಿಯಲ್ಲಿ ಠೇವಣಿ ಇಟ್ಟಿರುವವರು, ಸಂಘದ ಸದಸ್ಯರುಗಳ ಮಕ್ಕಳಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಸೊಸೈಟಿಯ ಉಪಾಧ್ಯಕ್ಷೆ ಹೆಚ್.ಜೆ.ಭಾಗ್ಯ ಗುರುರಾಜ್, ನಿರ್ದೇಶಕರುಗಳಾದ ಎಂ.ಎಸ್.ನರಸಿಂಹ, ಎಂ.ಎಸ್.ಕುಮಾರ್, ಕೆ.ಎಸ್.ಶಶಿಕುಮಾರ್, ಮಂಜುನಾಥ್, ಮಂಜುಳಾಕನಕರಾಜ್, ಶೃತಿಶ್ರೀನಿವಾಸಗೌಡ, ಎಸ್.ಕೆ.ಕಮಲರೇಣುಕೇಶ್, ಡಿ.ಆರ್.ಅವಿನಾಶ್, ಸಿಇಓ ಸಿಂಧುಮಂಜುನಾಥ್, ಸಹಾಯಕಿ ಮಮತಾ ರಾಜೇಶ್, ಮುಖಂಡರುಗಳಾದ ಮಟನ್ ಮಹದೇವ್ ಇದ್ದರು.

# ಚೌಡಯ್ಯ ಅವರದು ಪ್ರಾಮಾಣಿಕ ರಾಜಕೀಯ ಪರಂಪರೆ: ಬಿ.ಆರ್. ರವಿಕಾಂತೇಗೌಡ



**ಮಂಡ್ಯ:** ಡಾ.ಹೆಚ್.ಡಿ.ಚೌಡಯ್ಯ ನವರು ಪ್ರಾಮಾಣಿಕ ಹಾಗೂ ನಿಷ್ಕಲ್ಮಶ ರಾಜಕೀಯ ಪರಂಪರೆಯ ಪ್ರತೀಕವಾಗಿದ್ದರು. ಹೆಚ್.ಕೆ.ವೀರಣ್ಣಗೌಡರು, ಕೆ.ವಿ.ಶಂಕರಗೌಡರು ಮತ್ತು ಸಾಹುಕಾರ್ ಚೆನ್ನಯ್ಯನವರಂತಹ ಹಿರಿಯ ನಾಯಕರ ಪ್ರಾಮಾಣಿಕ ರಾಜಕೀಯ ಪರಂಪರೆಯನ್ನು ಚೌಡಯ್ಯನವರು ಮುಂದುವರಿಸಿಕೊಂಡು ಬಂದಿದ್ದರು ಎಂದು ನಿವೃತ್ತ ಐಜಿಪಿ ಬಿ.ಆರ್.ರವಿಕಾಂತೇಗೌಡ ಅಭಿಪ್ರಾಯಪಟ್ಟರು.

ನಗರದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ನಿತ್ಯ ಸಚಿವ ಕೆ.ವಿ. ಶಂಕರಗೌಡ ತರಬೇತಿ ಮತ್ತು ಉದ್ಯೋಗ ಕೇಂದ್ರದ ಸಭಾಂಗಣದಲ್ಲಿ ಜನತಾ ಶಿಕ್ಷಣ ಟ್ರಸ್ಟ್ ವತಿಯಿಂದ ಡಾ. ಹೆಚ್.ಡಿ. ಚೌಡಯ್ಯನವರ 99ನೇ ಜನ್ಮದಿನಾಚರಣೆ ಹಾಗೂ 2026ನೇ ಸಾಲಿನ ರಾಜ್ಯಮಟ್ಟದ ಸಮಾಜ ಸೇವಾ,ಕ್ರೀಡಾ ಮತ್ತು ಕೃಷಿ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ವಿದ್ಯಾರ್ಥಿ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಪದವೀಧರರಾಗಿದ್ದ ಚೌಡಯ್ಯನವರು ದೊಡ್ಡ ಹುದ್ದೆಗಳಿಗೆ ಹೋಗುವ ಅವಕಾಶವಿದ್ದರೂ ಗಾಂಧೀಜಿಯವರ 'ಮರಳಿ ಮಣ್ಣಿಗೆ' ತತ್ವಕ್ಕೆ ಬದ್ಧರಾಗಿ ಗ್ರಾಮೀಣಾಭಿವೃದ್ಧಿಗೆ ಶ್ರಮಿಸಿದರು. ಕೆ.ವಿ. ಶಂಕರಗೌಡರ ಮಾರ್ಗದರ್ಶನದಲ್ಲಿ ಸಹಕಾರ ಚಳವಳಿಯಲ್ಲಿ ತೊಡಗಿಸಿಕೊಂಡು ನಿಸ್ವಾರ್ಥ ಸೇವೆ ಸಲ್ಲಿಸಿದರು. ತಮ್ಮ ರಾಜಕೀಯ ಗುರು ಕೆ.ವಿ. ಶಂಕರಗೌಡರ ವಿರುದ್ಧವೇ ಸ್ಪರ್ಧಿಸಿ ಗೆದ್ದರೂ ಪರಸ್ಪರ ಗೌರವ ಮತ್ತು ಸಾರ್ವಜನಿಕ ಸಂಬಂಧಗಳನ್ನು ಎಂದಿಗೂ ಕೆಡಿಸಿಕೊಳ್ಳಲಿಲ್ಲ. ವೈಯಕ್ತಿಕ ನಿಂದನೆಗಳಿಲ್ಲದ ಗೌರವಾನ್ವಿತ ರಾಜಕಾರಣಕ್ಕೆ ಅವರು ಮಾದರಿಯಾಗಿದ್ದರು ಎಂದರು.

ಐದು ಬಾರಿ ಶಾಸಕರಾಗಿದ್ದರೂ ಸಚಿವ ಸ್ಥಾನದ ಆಸೆಗೆ ಬೀಳದೆ ನನ್ನ ಜನ ನಿರಾತಂಕವಾಗಿ ಬಾಳಬೇಕು ಎಂಬ ದೂರದೃಷ್ಟಿಯಿಂದ ಜನಸೇವೆ ಮಾಡಿದರು. ಉಡುಪಿನ ಸ್ವಚ್ಛತೆ ಮತ್ತು ಸಮಯಪಾಲನೆಯ ಶಿಸ್ತಿಗೆ ಹೆಸರಾಗಿದ್ದ ಅವರು ಕಾರ್ಯಕ್ರಮಗಳಿಗೆ ನಿಗದಿತ ಸಮಯಕ್ಕಿಂತ ಮುಂಚಿತವಾಗಿಯೇ ತಲುಪುತ್ತಿದ್ದರು. ಜಿಲ್ಲೆಯ ಯುವಜನರಿಗಾಗಿ ಕ್ರೀಡಾ ಸಮುಚ್ಚಯಗಳು ಸೇರಿದಂತೆ ಹಲವು ಸಾರ್ವಜನಿಕ ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಶಿಸುತ್ತಿರುವ ರಾಜಕೀಯ ಪರಂಪರೆಯಲ್ಲಿ ಸಂಸ್ಥೆಗಳನ್ನು ಮುರಿಯುವುದು ಸುಲಭ, ಆದರೆ ಕಟ್ಟುವುದು ಕಷ್ಟ. ಚೌಡಯ್ಯನವರು ಸಂಸ್ಥೆಗಳನ್ನು ಬೆಳೆಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಸಾರ್ವಜನಿಕ ಮತ್ತು ಸಂಸ್ಥೆಗಳ ಕೆಲಸಕ್ಕಾಗಿ ಯಾರ ಮನೆ ಬಾಗಿಲನ್ನಾದರೂ ಕಾಯಲು ಸಿದ್ಧರಿದ್ದ ಅವರು ತಮ್ಮ ವೈಯಕ್ತಿಕ ಕೆಲಸಕ್ಕಾಗಿ ಎಂದಿಗೂ ಯಾರ ಮುಂದೆಯೂ ಕೈಚಾಚಲಿಲ್ಲ ಎಂದರು.

**ಪ್ರಶಸ್ತಿ ಪುರಸ್ಕೃತರ ಮಾತು**

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಎನ್.ಎಸ್.ರಾಮೇಗೌಡ ಪ್ರತಿಯೊಂದು ವಿಶ್ವವಿದ್ಯಾಲಯಕ್ಕೂ ಮೂರು ಪ್ರಮುಖ ಉದ್ದೇಶಗಳಿರುತ್ತವೆ  ಬೋಧನೆ ಪರೀಕ್ಷೆ ಮತ್ತು ಸಂಶೋಧನೆ, ಹಾಗೂ ವಿಸ್ತರಣಾ ಚಟುವಟಿಕೆಗಳು ಅದರಲ್ಲೂ ಕೃಷಿ ವಿಶ್ವವಿದ್ಯಾಲಯಗಳು ತಮ್ಮ ಸಂಶೋಧನೆಗಳನ್ನು ರೈತರಿಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ತಮ್ಮಂತಹ ವ್ಯಕ್ತಿಗಳಿಗೆ ಸನ್ಮಾನ ಮಾಡುವುದರಿಂದ ತಮಗಷ್ಟೇ ಅಲ್ಲ, ಸಂಸ್ಥೆಯ ಗೌರವವೂ ಹೆಚ್ಚುತ್ತದೆ ಎಂಬುದರಲ್ಲಿ ನನಗೆ ನಂಬಿಕೆಯಿಲ್ಲ. ಇದರಿಂದ ತಮ್ಮ ಬಯೋಡೇಟಾ ಸುಧಾರಿಸಿದೆ ಎಂದು ತಮಾಷೆಯಾಗಿ ಹೇಳಿದರು. ಶಂಕರಗೌಡರು ಹಾಗೂ ಅವರ ಕೊಡುಗೆಗಳನ್ನು ನೆನಪಿಸಿಕೊಂಡರು.

ಮತ್ತೋರ್ವ ಕೃಷಿ ಪ್ರಶಸ್ತಿ ಪುರಸ್ಕೃತ ಪಾಲಹಳ್ಳಿಯ ಎನ್. ವೆಂಕಟೇಶ್ ಮಾತನಾಡಿ ತಮಗೆ ನೀಡಿದ ಪ್ರೋತ್ಸಾಹ ಮತ್ತು ಬೆಂಬಲಕ್ಕೆ ಧನ್ಯವಾದ ಸಲ್ಲಿಸಿದರು. ಪ್ರತಿಯೊಬ್ಬರ ಪ್ರೀತಿ ಮತ್ತು ಪ್ರೋತ್ಸಾಹವು ತಮಗೆ ಮತ್ತಷ್ಟು ಎತ್ತರಕ್ಕೆ ಬೆಳೆಯಲು ಹೊಸ ಉತ್ಸಾಹ ನೀಡಿದೆ ಎಂದು ಹೇಳುತ್ತಾ ಸಣ್ಣ ಪ್ರಯತ್ನಕ್ಕೂ ಬೆಂಬಲ ನೀಡಿದ ಎಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪಿಇಟಿ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ಪ್ರಶಸ್ತಿ ಪುರಸ್ಕೃತರಾದ ವೆಂಕಟೇಶ್ ಮತ್ತು ರಾಮೇಗೌಡರ ಸಾಧನೆಗಳನ್ನು ಶ್ಲಾಘಿಸಿ ವಿಶೇಷವಾಗಿ ವೆಂಕಟೇಶ್ ಅವರ ಕೃಷಿ ಸಾಧನೆಯನ್ನು ಪ್ರಸ್ತಾಪಿಸಿ ಪ್ರತಿಯೊಬ್ಬರೂ ಬಿಡುವಿನ ವೇಳೆಯಲ್ಲಿ ಅವರ ಕೃಷಿ ಕ್ಷೇತ್ರವನ್ನು ನೋಡಿ ಜ್ಞಾನ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಯುವಜನರು ಮತ್ತು ವಿದ್ಯಾರ್ಥಿಗಳು ತಮಗಿಷ್ಟವಿರುವ ಕ್ಷೇತ್ರದಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ಸಾಧನೆ ಮಾಡಲು ಮತ್ತು ಸಮಯವನ್ನು ವ್ಯರ್ಥ ಮಾಡದಿರಲು ಕರೆ ನೀಡಿದರು.

**ಪ್ರಶಸ್ತಿ ಪುರಸ್ಕೃತರಿಗೆ ಗೌರವ:** 2026ನೇ ಸಾಲಿನ ಡಾ. ಹೆಚ್.ಡಿ. ಚೌಡಯ್ಯ ಸಮಾಜ ಸೇವಾ ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಎನ್. ಎಸ್. ರಾಮೇಗೌಡ ಅವರಿಗೆ, ಡಾ. ಹೆಚ್.ಡಿ. ಚೌಡಯ್ಯ ಕೃಷಿ ಪ್ರಶಸ್ತಿಯನ್ನು ಶ್ರೀರಂಗಪಟ್ಟಣದ ಪಾಲಹಳ್ಳಿಯ ಪ್ರಗತಿಪರ ಕೃಷಿಕ ಎನ್. ವೆಂಕಟೇಶ ಅವರಿಗೆ 20 ಸಾವಿರ ನಗದು ಪ್ರಶಸ್ತಿ ಫಲಕ ನೀಡಿ ಗೌರವಿಸಲಾಯಿತು. ಪ್ರತಿಭಾ ವಿದ್ಯಾರ್ಥಿ ಪ್ರಶಸ್ತಿಯನ್ನು ಸರ್ಕಾರಿ ಪ್ರೌಢಶಾಲೆ ಹೊಳಲಿನ ಕುಮಾರಿ ಬಿಂದುಶ್ರೀ.ಡಿ.ಎಸ್. ಮತ್ತು ಕುಮಾರ ಪ್ರಸನ್ನ.ಎಂ ಹಾಗೂ ಶ್ರೀ ವೆಂಕಟೇಶ್ವರ ವಿದ್ಯಾನಿಕೇತನ ಪ್ರೌಢಶಾಲೆಯ ಕುಮಾರಿ ನಂದಿತಾ ಮತ್ತು ಕುಮಾರ ಪ್ರಜ್ವಲ್ ಜೆ. ಅವರಿಗೆ ತಲಾ 5 ಸಾವಿರ ನಗದು ಪುರಸ್ಕಾರ ನೀಡಲಾಯಿತು.

ಸಮಾರಂಭದಲ್ಲಿ ಟ್ರಸ್ಟ್ ಧರ್ಮದರ್ಶಿಗಳಾದ ಹೆಚ್.ಸಿ. ಮೋಹನ್ ಕುಮಾರ್,ಡಾ.ರಾಮಲಿಂಗಯ್ಯ ಉಪಸ್ಥಿತರಿದ್ದರು

## ಯುವಜನರಲ್ಲಿ ವೈಚಾರಿಕ ಚಿಂತನೆ ಬೆಳೆಸಲು ಸಾಹಿತ್ಯಿಕ ಚಟುವಟಿಕೆ ಅಗತ್ಯ: ಕಾ.ತ. ಚಿಕ್ಕಣ್ಣ



**ಮಂಡ್ಯ:** ಕನಕದಾಸರು, ತತ್ವಪದಕಾರರು, ಶರಣರು ಹಾಗೂ ಭಕ್ತಿ ಸಾಹಿತ್ಯದ ಮೌಲ್ಯಯುತ ವಿಚಾರಗಳನ್ನು ಯುವಜನತೆ ಮತ್ತು ಸಮಾಜಕ್ಕೆ ತಲುಪಿಸುವ ಉದ್ದೇಶದಿಂದ ಯುವ ಸಮುದಾಯ, ಸಾರ್ವಜನಿಕರು ಹಾಗೂ ವಿದ್ವಾಂಸರನ್ನು ಒಳಗೊಂಡಂತೆ ವಿವಿಧ ಹಂತಗಳಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು ಹಾಗೂ ಮಂಡ್ಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರ ಕಾಲೇಜು ಸಂಸ್ಕೃತಿ ಪುನಶ್ಚೇತನ ಶಿಬಿರ ಹಾಗೂ ಸ್ಪರ್ಧಾ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಸಾಹಿತ್ಯ ಕೃತಿಗಳನ್ನು ಓದಿ, ಅರ್ಥೈಸಿಕೊಂಡು ಅದರ ಆಶಯವನ್ನು ಗ್ರಹಿಸುವ ಸಾಮರ್ಥ್ಯ ಬೆಳೆಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಯುವಜನರಲ್ಲಿ ಧೈರ್ಯ, ಸೃಜನಶೀಲತೆ ಮತ್ತು ವೈಚಾರಿಕ ಚಿಂತನೆಯನ್ನು ಬೆಳೆಸಬೇಕಿದೆ ಎಂದರು.

ಪ್ರಬಂಧ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳ 45 ವಿದ್ಯಾರ್ಥಿಗಳು ಭಾಗವಹಿಸಿದ್ದು, ಅವುಗಳಲ್ಲಿ ಅತ್ಯುತ್ತಮ 15 ಪ್ರಬಂಧಗಳನ್ನು ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಕನಕದಾಸರು, ಬಸವಣ್ಣ, ಬುದ್ಧ, ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳು ಇಂದಿನ ಸಮಾಜಕ್ಕೆ ಹೇಗೆ ಪ್ರಸ್ತುತವಾಗಿವೆ ಎಂಬ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದವನ್ನೂ ಆಯೋಜಿಸಲಾಗಿದೆ. ಶಿಕ್ಷಣವನ್ನು ಕೇವಲ ಅಂಕಗಳು ಮತ್ತು ಉದ್ಯೋಗಕ್ಕೆ ಸೀಮಿತಗೊಳಿಸದೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಚಲನಚಿತ್ರ ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ಕಲ್ಪಿಸಬೇಕು. ಸಮಾಜದಲ್ಲಿ ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳೊಂದಿಗೆ ಬದುಕುವ ಮನೋಭಾವ ಬೆಳೆಸುವುದು ಅಗತ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಮಂಡ್ಯ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಪ್ರೊ. ವೆಂಕಟರಮಣ ಜಿ.ವಿ., ಉಪಕುಲಸಚಿವರು (ಶೈಕ್ಷಣಿಕ) ಡಾ. ಶಿವರಾಮು ಎಂ.ವೈ., ಪ್ರಧಾನ ಸಂಚಾಲಕ ಕೀಲಾರ ಕೃಷ್ಣೇಗೌಡ, ಜಿ.ಡಿ. ಶಿವರಾಜು, ಉಪಸಂಚಾಲಕ ಚಕ್ಕರೆ ಶಿವಶಂಕರ್, ಕನ್ನಡ ಪ್ರಾಧ್ಯಾಪಕಿ ಉಷಾರಾಣಿ ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಭಯ ಬಿಟ್ಟರೆ ಬದುಕು ಗೆಲುವು




ಭಯವು ಕಾಲಿಗೆ ಬಿಗಿದ ಸರಪಳಿ. ಅದು ಇದ್ದರೆ ಜೀವನ ಒಂದು ಹೆಜ್ಜೆಯೂ ಮುಂದೆ ಸಾಗದು. ಭಯ ಹುಟ್ಟಿದಾಗ ಮೆದುಳಿನ ಹೈಪೋಥಲಾಮಸ್ ಎಚ್ಚರಗೊಂಡು ಗ್ಲುಕೋಕಾರ್ಟಿಕಾಯ್ಡ್ ರಸ ದೇಹದಲ್ಲಿ ಹರಿಯುತ್ತದೆ. ಎದೆ ಡವಡವ, ಕೈ ನಡುಕ, ಹೊಟ್ಟೆಯಲ್ಲಿ ಹಸಿವಿನ ನೆರಳು. ನಾರ್ವೆ ದೇಶದ ಅಧ್ಯಯನ ಹೇಳುವಂತೆ, ದಿನಕ್ಕೊಂದು ಸಣ್ಣ ಭಯವನ್ನು ದಾಟುವವರಲ್ಲಿ ಮೆದುಳಿನ ನ್ಯೂರೋಪ್ಲಾಸ್ಟಿಸಿಟಿ ಹೆಚ್ಚಿ ಹೊಸ ಕೌಶಲ ಬೇಗ ಅರಳುತ್ತದೆ. ಸರಪಳಿ ಕಿತ್ತ ಮನಸ್ಸಿಗೆ ರೆಕ್ಕೆ ಬರುತ್ತದೆ.

ಭಯರಹಿತ ಮನುಷ್ಯನೇ ಸಮಾಜಕ್ಕೆ ದೀಪ. ಕರೆಂಟ್ ತಪ್ಪಿದ ರಾತ್ರಿ ಮೇಣದಬತ್ತಿ ಹಿಡಿದು ಅಜ್ಜಿಯನ್ನು ನದಿ ದಾಟಿಸುವ ಯುವಕ ಊರಿಗೆ ಧೈರ್ಯ ತುಂಬುತ್ತಾನೆ. ಸಾಲದ ಬಗ್ಗೆ ಬೆದರದೆ ತರಕಾರಿ ಬೆಳೆದು ಮಾರುವ ಮಹಿಳೆ ನಾಲ್ಕು ಹೆಣ್ಣುಮಕ್ಕಳಿಗೆ ದುಡಿಮೆಯ ದಾರಿ ತೋರಿಸುತ್ತಾಳೆ. ಸಭೆಯಲ್ಲಿ ನಡುಗದೆ ಹಕ್ಕು ಕೇಳುವ ರೈತ ಯುವಜನತೆಗೆ ನ್ಯಾಯದ ಧ್ವನಿ ಆಗುತ್ತಾನೆ. ಒಬ್ಬರ ನಡುಕರಹಿತ ನಡೆಯು ಹತ್ತು ಬದುಕನ್ನು ಎತ್ತಿ ನಿಲ್ಲಿಸುತ್ತದೆ.

ಭಯ ಜಯಿಸುವುದು ಅಭ್ಯಾಸದಿಂದ. ನಸುಕಿನಲ್ಲಿ ಇಂದಿನ ಒಂದು ಅಂಜಿಕೆಯನ್ನು ಕಾಗದದಲ್ಲಿ ಬರೆಯಿರಿ. ಬಿಸಿಲು ಮುಳುಗುವ ಮುನ್ನ ಅದನ್ನು ಎದುರಿಸಿ ಕಾಗದವನ್ನು ನೀರಿಗೆ ಬಿಡಿ. ಕನ್ನಡಿ ಎದುರು ನಿಂತು "ನಾನು ನನ್ನ ಗೆಳೆಯ" ಎಂದು ಮೂರು ಸಲ ಹೇಳಿ. ಅಪರಿಚಿತರಿಗೆ ನೀವೇ ಮೊದಲು ನಮಸ್ಕರಿಸಿ. ಭಾನುವಾರ ದೇವಸ್ಥಾನದ ಮೆಟ್ಟಿಲೇರಿ ಊರನ್ನು ನೋಡಿ. ಆಗ ಸಮಸ್ಯೆ ಅತ್ಯಂತ ಚಿಕ್ಕದಾಗಿ ಕಾಣುತ್ತದೆ.

ಭಯದ ಕೋಟೆ ಕುಸಿದ ಕ್ಷಣ ಬದುಕಿನ ಅಂಗಳ ವಿಸ್ತಾರವಾಗುತ್ತದೆ. ದಿಗಿಲು ಕಳೆದ ದಿನದಿಂದಲೇ ಆಯುಷ್ಯದ ರುಚಿ ಹೆಚ್ಚುತ್ತದೆ. ಭಯ ಗೆದ್ದವನಿಗೆ ಸಾವು ಕೂಡ ಹೊಸ ಬೆಳಗಿನಂತೆ ಸ್ನೇಹಿತವಾಗುತ್ತದೆ.

ಅಂಕಣ-32

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

87479 69381

# ಜನಪದ ಗಾಯನ ನಟನೆ ಶೋಭಾ ಹರೀಶ್



ಗೊರೂರು ಅನಂತರಾಜು,
ಹಾಸನ
9449462879

ಹಾಸನದ ಹಳೇ ಬಸ್ ನಿಲ್ದಾಣ ರಸ್ತೆಯ ಗಣಪತಿ ಪೆಂಡಾಲ್ ನಲ್ಲಿ ಕಾವ್ಯ ಗಾಯನ ಕುಂಚ ನೃತ್ಯ ಕಾರ್ಯಕ್ರಮ ಮೊನ್ನೆ ನಡೆಯಿತು. ಸ್ಥಳೀಯ ಹತ್ತು ಕವಿಗಳಿಂದ ಕವಿತೆ ಆಹ್ವಾನಿಸಿ, ಅದಕ್ಕೆ ತಾವೂ ಸೇರಿ ಐದು ಗಾಯಕರಿಂದ ರಾಗ ಸಂಯೋಜಿಸಿ ವೇದಿಕೆಯಲ್ಲಿ ಹಾಡುವ ವ್ಯವಸ್ಥೆ ಮಾಡಿದ್ದರು ಗಾಯಕಿ ಕಲಾವತಿ ಮಧುಸೂಧನ್. ಶಿವಕುಮಾರ್ ಆರ್. ಬಸವರಾಜು, ಚಂದ್ರಪ್ರಭ ಇವರು ಚಿತ್ರಕಲಾ ಶಿಕ್ಷಕರು. ಇವರೊಂದಿಗೆ ವಿದ್ಯಾರ್ಥಿ ಕಲಾವಿದರನ್ನು ಶಿವು ಸಂಘಟಿಸಿ ಅವರೆಲ್ಲಾ ರಂಗದ ಮೇಲೆ ಗಾಯಕರು ಹಾಡು ಹೇಳುತ್ತಿರುವಾಗಲೇ ಕಾವ್ಯದ ಅರ್ಥ ಬಿಂಬಿಸುವ ಚಿತ್ರ ಬಿಡಿಸಬೇಕಿತ್ತು. ಇದು ಪ್ರೇಕ್ಷಕರ







ಎದುರೇ ಗಾಯಕರ ಹಾಡು ಮುಗಿಯುವಷ್ಟರಲ್ಲಿ ಚಿತ್ರ ಬರೆದು ಪೂರ್ಣಗೊಳಿಸುವ ಪ್ರಕ್ರಿಯೆ. ಪರಿಣಿತ ಕಲಾವಿದರು ಮೂರು ನಾಲ್ಕು ನಿಮಿಷಗಳಲ್ಲಿ ಮುಗಿಸಿದನ್ನು ಈ ಹಿಂದೆ ಗಮನಿಸಿದ್ದೆ. ಹೊಸ ಕಲಾವಿದರು ಕನಿಷ್ಟ ಐದು ನಿಮಿಷ ಸಮಯ ಚಿತ್ರ ಬರೆದು ಬಣ್ಣ ತುಂಬಲು ಬೇಕಿತ್ತು.

ಇಲ್ಲಿ ಕವಿ ಕವಿತೆ ವಾಚಿಸಿ ನಂತರ ಗಾಯಕರು ಹಾಡಿದರೆ ಸಮಯ ಸಿಗಬಹುದಿತ್ತು. ಆದರೆ ಹಾಡುಗಾರಿಕೆ ಮುಂದೆ ಕವಿತೆ ವಾಚನ ಸಪ್ಪೆಯಾಗುವುದರಿಂದ ಉಪ್ಪಿಲ್ಲದ ಸಾರಿನಂತೆ ಪ್ರೇಕ್ಷಕರರಿಗೆ ರುಚಿಸದಾಗಿತ್ತು. ಅದು ಪೂರ್ಣ ಮನರಂಜನಾ ಕಾರ್ಯಕ್ರಮ. ಅಲ್ಲಿ ಹಾಡು ಆಲಿಸಲು ಕುಳಿತ ಕಲಾಮಾನಿಗಳೇ ಹೆಚ್ಚಿದ್ದಾರೆ. ಅದಕ್ಕಾಗಿ ನಾವು ಕವಿಗಳು ಕೆಲವರು ಕವಿತೆ ವಾಚಿಸಲಿಲ್ಲ. ಹಾಡುಗಾರಿಕೆಯಲ್ಲಿ ಯೋಗೇಂದ್ರ ದುದ್ದ, ಜಿ.ಆರ್.ಶ್ರೀಕಾಂತ್, ಕಲಾವತಿ ಮಧುಸೂಧನ್, ಆರ್. ಬಿ. ಶೋಭಾ ಹರೀಶ್ ಚೆನ್ನಾಗಿ ಹಾಡಿದರು. ಆದರೆ ಚಿತ್ರ ಕಲಾವಿದರು ಚಿತ್ರ ಬರೆದು ಮುಗಿಸಲು ಸಾಧ್ಯವಾಗದೆ ಕಲಾವತಿ ಮೇಡಂ ಕರೋಕೆ ಹಾಡಿನಿಂದ ಸಮಯ ನೀಡಿ ಸರಿದೂಗಿಸಿದರೂ ಗಾಯನಕ್ಕೆ ಹಿನ್ನೆಲೆ ಸಂಗೀತ ಇರಬೇಕಿತ್ತು ಆಗ ನಮ್ಮ ಹಾಡುಗಳು ಇನ್ನೂ ಚೆನ್ನಾಗಿ ಮೂಡಿ ಬರುತ್ತಿದ್ದವು ಎಂದರು ಗಾಯಕ ಯೋಗೇಂದ್ರ ದುದ್ದ. ಇದರಿಂದ ಚಿತ್ರ ಕಲಾವಿದರಿಗೂ ಒಂದೆರಡು ನಿಮಿಷ ಹೆಚ್ಚಿನ ಸಮಯ ಸಿಗುತ್ತಿತ್ತು ಎಂಬುದು ಸಾಮಾನ್ಯ ಅಭಿಪ್ರಾಯವಾಗಿತ್ತು. ಆದರೆ ಕೀ ಬೋರ್ಡ್, ತಬಲವಾದಕರಿಗೆ ಸಂಭಾವನೆ ಕೊಡಬೇಕಲ್ಲ..! ಗಣಪತಿ ಸಮಿತಿಯವರು ಕೊಡುತ್ತಿಲ್ಲ. ಮಾರನೇ ದಿನ ಸಮೂಹ ಗಾಯನ, ನೃತ್ಯ ಇದೆ ಎಂದು ನೋಡಲು ಹೋದೆ. ಒಂದು ತಂಡವೂ ಇರಲಿಲ್ಲ. ಗಾಯಕಿ ವಾಣಿ ನಾಗೇಂದ್ರ ಅವರು ಪ್ರವೇಶ ದ್ವಾರದಲ್ಲೇ ಎದುರಾದರು. ನಾವು ಗಣಪತಿ ಸೇವೆಗೆ ಫ್ರೀ ಹಾಡೋಣ. ಆದರೆ ಕೀ ಬೋರ್ಡ್, ತಬಲ ಸಂಗೀತ ಸಹಕಾರಕ್ಕೆ ಕನಿಷ್ಠ ಐದು ಸಾವಿರ ಬೇಕು. ಪ್ರಾಯೋಜಕರನ್ನು ನಾವೇ ಹುಡುಕಿಕೊಳ್ಳಬೇಕು.. ಎಂದು ವಿಷಾದಿಸಿದರು. ಇರಲಿ ವಿಷಯಕ್ಕೆ ಬರುತ್ತೇನೆ. ಇತ್ತ

ಕಾವ್ಯ ಕುಂಚ ಗಾಯನದಲ್ಲಿ ಆರ್. ಬಿ.ಶೋಭಾ ಹರೀಶ್ ಎರಡು ಹಾಡುಗಳನ್ನು ಹಾಡಿದರು. ಒಂದು ಓಕೆ ಇನ್ನೊಂದಕ್ಕೆ ತುಸು ತ್ರಾಸದಿಂದ ರಾಗ ಹಾಕಿದ್ದಾಗಿ ಹೇಳಿದರು. ನನ್ನದೇ ರಚನೆಯ ಹಾಡಿತ್ತು ಎನ್ನುವ ಶೋಭಾ ಗಾಯಕಿ ಅಷ್ಟೇ ಅಲ್ಲಾ ಕವಯಿತ್ರಿ ಎಂದು ಕೂಡ ತಿಳಿಯಿತು.



ನಾಟಕಕಾರರು ಎಸ್.ಎಸ್. ಪುಟ್ಟೇಗೌಡರು ಕವಿತೆ ವಾಚಿಸಲು ಮತ್ತು ತಮ್ಮ ರಚನೆಯ ಹಾಡು ಕೇಳಲು ಮೈಸೂರಿನಿಂದ ಬಂದಿದ್ದರು. ಹಿನ್ನೆಲೆ ಸಂಗೀತ ಇಲ್ಲ ಎಂದು ತಿಳಿದು ನಿರಾಶರಾದರು. ಶೋಭಾ ಅವರು ಕೆಲ ದಿನಗಳ ಹಿಂದೆ ಶನಿಮಹಾತ್ಮೆ ನಾಟಕದಲ್ಲಿ ನಟಿಸಿ ಹಾಡಿದ್ದರು. ಅದನ್ನು ಗೌಡ್ರಿಗೆ ತಿಳಿಸಿದೆ. ಕೇಳಿ ಗೆಲುವಾದರು. ದ್ರೌಪದಿ, ಕುಂತಿ ಪಾತ್ರ ಮಾಡಿರುವ ವಿಚಾರ ಕೇಳಿ ನಂತರ ವೇದಿಕೆಯಲ್ಲಿ ಹಾಡು ಕೇಳಿ ಮೆಚ್ಚಿಕೊಂಡರು. ಮುಂದೆ ರಂಗದ ಮೇಲೆ ತರಲಿರುವ ತಮ್ಮ ಹೊಸ ನಾಟಕ ಕುಮಾರ ರಾಮದಲ್ಲಿ ಒಂದು ಪಾತ್ರ ಮಾಡಿ ಎಂದರು.

ಮೇಡಂ, ನಿಮ್ಮದು ಯಾವ ಊರು ಎಂದೆ. ಅಷ್ಟಕ್ಕೆ ಅವರು ಊರು ಕೇರಿ ಹಾಡು ಪಾಡು ಎಲ್ಲವನ್ನು ಹೇಳಿ ಫೋಟೋ ವಿಡಿಯೋ ಕಳಿಸಿದರು. ಇವರ ತಂದೆ ಬಸವಣ್ಣಯ್ಯ. ಊರು ಚಿಕ್ಕಮಗಳೂರು ತಾ. ಮರ್ಲೆ ಅಂಚೆ ರಾಮನಹಳ್ಳಿ. ನಾನು ಚಿಕ್ಕವಳಿದ್ದಾಗ ನಮ್ಮ ತಂದೆ ಶನಿ ಪ್ರಭಾವ ನಾಟಕದಲ್ಲಿ ನಟಿಸುತ್ತಿದ್ದರು ಎಂದರು. ಅದು ಇವರ ಮೇಲೆ ಪ್ರಭಾವ ಬೀರಿದೆ. ಇವರ ಪತಿ ಹರೀಶ್ ಅವರು ಬೇಲೂರು ತಾಲ್ಲೂಕು ಹಗರೆ ಹತ್ತಿರದ ಶಿವಯೋಗಿಪುರದವರು. 15 ವರ್ಷಗಳಿಂದ ಬೇಲೂರಿನಲ್ಲಿ ವಾಸವಿರುವ ಇವರು ಅಲ್ಲಿ ಅರ್ಚಕರು.

ಸಾರ್, ನಾನು 6ನೇ ತರಗತಿಯಿಂದಲೇ ಹಾಡುಗಾರಿಕೆ ಆರಂಭಿಸಿದೆ. 2003ರಿಂದ ಹಾಡುಗಳ ರಚನೆ ಮಾಡುತ್ತಾ ಹಾಡುತ್ತಿರುವೆ. 150 ಬರೆದಿದ್ದೇನೆ ಎಂದರು.2008ರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯಕ್ರಮ ಮಾಡುತ್ತಿರುವೆ. 2008ರಲ್ಲಿ ಗಣಪತಿ ಕಾರ್ಯಕ್ರಮದಲ್ಲಿ ಭಾಗಿಯಾದೆ. ಬೇರೆ ತಂಡದಲ್ಲೂ ಹಾಡ್ತಾ ಇರ್ತಿನಿ. 2025 ರಿಂದ ಪೌರಾಣಿಕ ನಾಟಕ ಕುರುಕ್ಷೇತ್ರದಲ್ಲಿ ಗಾಂಧಾರಿ, ಕುಂತಿ, ರಾಮಾಯಣದಲ್ಲಿ ಕೌಶಲ್ಯ ಪಾತ್ರ ಮಾಡಿರುವೆ. ನಾನು ನೋಡಿದ ಶನಿಪ್ರಭಾವ ಒಂದೇ ನಾಟಕದಲ್ಲಿ ಸೂತ್ರಧಾರಿ, ಸತ್ಯನಾರಾಯಣ, ಅಗಸನ ಹೆಂಡತಿ 3 ಪಾತ್ರ ಮಾಡಿದ್ದರಂತೆ..! ನಾನು ಸೂತ್ರದಾರಿ ಹಾಡು ಕೇಳಿ ಮಧ್ಯೆ ಎದ್ದು ಬಂದಿದ್ದೆ ಅಷ್ಟೇ. ಇವರಿಗೆ ದಾವಣಗೆರೆಯಲ್ಲಿ ಬೆಳಕು ಸಂಸ್ಥೆಯಿಂದ ರಾಷ್ಟ್ರ ಮಟ್ಟದ ಜನಪದ ರತ್ನ ಪ್ರಶಸ್ತಿ ಬಂದಿದೆ. ಚೇತನ ಟ್ರಸ್ಟ್ ಧಾರವಾಡ ಇವರಿಂದ ಸಿದ್ಧಗಂಗಾ ರಾಷ್ಟ್ರೀಯ ಸೇವಾ ಸ್ಫೂರ್ತಿ ಪ್ರಶಸ್ತಿ ಬಂದಿದೆ. ಹಾಸನ ತಾ. ಹಿರಿಹಳ್ಳಿಯಲ್ಲಿ 4ನೇ ವರ್ಷ ದನಗಳ ಜಾತ್ರೆ ಮಹೋತ್ಸವದಲ್ಲಿ ಕಲಾ ತಪಸ್ವಿ ಅಭಿನಂದನೆ ಪತ್ರ ಸಿಕ್ಕಿದೆ. ಇತ್ತೀಚಿಗೆ ಜಾನಕಿ ಅಮ್ಮನ ನುಡಿನಮನ ಕಾರ್ಯಕ್ರಮದಲ್ಲಿ ಹಾಡುವ ಅವಕಾಶ ಸಿಕ್ಕಿತ್ತು ಎಂದರು. ಅವಕಾಶ ಹುಡುಕಿ ಬಸ್ಸಿನಲ್ಲಿ ಹಾಸನಕ್ಕೆ ಬರುತ್ತಾರೆ. ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಣ ಇಲ್ಲ ಎಂದು ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿಲ್ಲ. ಮಹಿಳೆಯರಿಗೆ ಫ್ರಿ ಬಸ್ ಇದೆ. ಬರಗಾಲದಲ್ಲಿ ಹನಿ ನೀರು ಸಿಕ್ಕಂತೆ ಹಾಡುವ ಆಸೆಯಲ್ಲಿ ಪ್ರಯಾಣಿಸುತ್ತಿದ್ದಾರೆ. ಮತಿಘಟ್ಟ ಕೃಷ್ಣಮೂರ್ತಿ ಅವರ ಹುಟ್ಟು ಹಬ್ಬ ಕಾರ್ಯಕ್ರಮದಲ್ಲಿ ಇವರ ಜನಪದ ಕಲೆ ಗುರುತಿಸಿ ಜನಪದ ಪ್ರಶಸ್ತಿ ಸಿಕ್ಕಿದೆ. ಹಲವಾರು ಕವಿಗೋಷ್ಠಿಯಲ್ಲಿ ಕವನ ವಾಚನ ಮಾಡಿದ್ದೇನೆ. ಬೇರೆಯವರ 16 ಕವನಗಳಿಗೆ ರಾಗ ಹಾಕಿ ಹಾಡಿದ್ದೇನೆ. ನಿಮ್ಮ ರಚನೆಗಳನ್ನು ಕಳಿಸಿ ಸಾರ್, ಅವುಗಳಿಗೆ ಟ್ಯೂನ್ ಹಾಕಿ ಯೂ ಟ್ಯೂಬ್ ಗೆ ಹಾಕುವೆ ಎಂದರು.

# ಅರಿವು ಮನೆಮಾಡಿರಲಿ

## ಮುದ್ದುರಾಮನ ಅರಿವು ಭಾಗ- 7



ಡಾ. ಪ್ರದೀಪಕುಮಾರ ಹೆಬ್ರಿ
98440 18457

**ಇಲ್ಲಿ ಕಂಡದ್ದಿಷ್ಟು; ಕೇಳಿದುದು ಒಂದಿಷ್ಟು**
**ನೆನೆದು ತಿಳಿದದ್ದಿಷ್ಟು; ಭಾವಿಸಿದುದಿಷ್ಟು.**
**ಕಾಣದೆಯೆ ಕೇಳದೆಯೆ ನೆನೆಯದಿರುವುದದೆಷ್ಟೊ**
**ಇಲ್ಲಿ ಇನ್ನೇನಿದೆಯೊ!- ಮುದ್ದುರಾಮ**

ನಮ್ಮ ಬದುಕು ಅಶಾಂತಿಗೆ ನೆಲೆಯಾಗುವ ಸಂಗತಿಗಳಿಂದ ತುಂಬಿ ಹೋಗಿದೆ. ಇದರೊಡನೆ ನಿಜಸಂಗತಿಯೂ ಇಲ್ಲವೆಂದಲ್ಲ. ಆದರೆ ನಾವು ಸದಾ ಅಶಾಂತಿಯ ದಾಸರಾಗಬೇಕೆಂದಿಲ್ಲ. ನಮ್ಮ ಜೀವನದ ನಿಜನಿಯಮವೇ ಪರಿವರ್ತನೆ ಅಥವಾ ಬದಲಾವಣೆ. ಈ ಜಗದಲ್ಲಿ ' ಸ್ಥಿರ ' ಎಂಬುದಾವುದೂ ಇಲ್ಲ. ಆದರೆ ನಿಜಸಂಗತಿಯ ಅರಿವಿನಲ್ಲಿ ನಾವು ನಮ್ಮ ತಪ್ಪು ನಿರ್ಧಾರಗಳನ್ನು ಸರಿಪಡಿಸಿಕೊಂಡು ಮುಂದುವರಿದರೆ ಮುಂದೊಂದು ದಿನ ಸತ್ಯದರ್ಶನದಿಂದ ಉದಿಸುವುದು ಅರಿವು ಎಂಬುದು ಖಚಿತವಿಹ ಅರಿವು. ನಮ್ಮನ್ನು ನಾವು ಅರಿಯಲು ಇದೇ ತೋರ್ಗಂಬ ದಾರಿ.

ಬೊಗಸೆ ನೀರು ಕುಡಿದಂತೆ ನೀರಡಿಕೆಯಾಯಾಸ ನೀಗುತ್ತದೆ. ಆದರೆ ಇಷ್ಟರಿಂದಲೇ ಸಂತೃಪ್ತಿಯೆಂಬ ಭಾವ ಸರಿಯಲ್ಲ. ಆದರೆ ನಮ್ಮ ಬದುಕಿನಲ್ಲಿ ಒಳಿತ ವಿಚಾರಗಳಿಂತಿರಬೇಕೆನುವ ಆಸೆಯಿದ್ದು ಅದು ಈಡೇರಿದಾಗ ತೃಪ್ತಿಯ ಬೆಳಕು ಮನವೆನುವ ಮಹಾಮನೆ ಯಲ್ಲಿ. ಈ ತೃಪ್ತಿಯೆನುವ ಮಹಾಮನೆಯಲ್ಲಿ ಬದುಕಲಾಗದಿದ್ದರೆ ಸುತ್ತಲಿನ ಏನನ್ನೂ ಕಾಣಲಾಗದ ಅಂಧರಾಗುತ್ತೇವೆ. ಆದರೆ ನಮ್ಮ ಬಾಳು ಬೆಳಕ ತೋರುತ್ತಿದ್ದರೆ ಭಾವಶುದ್ಧತೆಯಿಂದ ಕನಸು ಹಸಿರಾಗುತ್ತದೆ.



ಕ.ಸಿ.ಶಿವಪ್ಪ

ನಾವೆಂದೂ ದೃಢಹೆಜ್ಜೆ ಇರದಿರುವವರಂತೆ ಶಂಕರನ ಅರಿವಿದ್ದು ಇಳಿಜಾರಿನಲ್ಲಿ ಜಾರುವವರಾಗಬಾರದು. ನಮ್ಮ ಬದುಕು ಮರೆವಿನ ನೆರಳಾಗಬಾರದು. ಏನನ್ನಾದರೂ ಬೆರಳತುದಿಯಿಂದ ತೋರಿದರಲ್ಲಿ ಕ್ಷೇಮಸೂಚನೆ ಯೊಡನೆ ಪ್ರೇಮದಂಕಿತದ ಮುದ್ರೆ ಅಲ್ಲಿದ್ದು ಅರಿವು ಮನೆ ಮಾಡಿರಬೇಕು.

ನಮ್ಮ ಪುರಾಣ ಕಥೆಗಳ ಅರಿವು ತುಂಬ ಸುಂದರವಾಗಿ ಬಿತ್ತರಗೊಂಡಿದೆ:-

**ಕೇಳಿ ಭಗವದ್ಗೀತೆ ಪಾರ್ಥ ಸಂಯಮಿಯಾದ**
**ತೋರಿ ಕೊಡುಗೆಯ ಗರಿಮೆ ಶಿಬಿ ಧನ್ಯನಾದ.**
**ನೀಡಿ ವಸ್ತ್ರವ ಸ್ತ್ರೀಗೆ ಶಾಮ ಶ್ರೀನಿಧಿಯಾದ.**
**ಸ್ತುತಿಸಿ ಹನುಮನೆ ಆದ- ಮುದ್ದುರಾಮ**

ನಮ್ಮ ಜೀವನಕ್ಕೆ ಬೆಲೆ ಬರುವುದು ಬರಿಯ ವಸ್ತು, ವೈಭವಗಳಿಂದಲ್ಲ, ಶಾಂತಿಯ ಅನುಭವದಿಂದ. ಧೀಮತಿಯ ಅನುಭಾವದಿಂದ. ಜ್ಞಾನ ಎಲ್ಲಿರುವುದೋ ಅಲ್ಲಿ




ಶಾಂತಿ, ನೆಮ್ಮದಿ. ನಮ್ಮ ಬದುಕಿಗಿದನ್ನು ರಾಮಾಯಣ, ಮಹಾಭಾರತದ ಕಥೆಗಳು ಸವಿಸ್ತಾರವಾಗಿ ಅರುಹಿವೆ. ಇದರ ಹಿನ್ನೆಲೆಯಲ್ಲೇ ಪ್ರಭುದೇವರು ನುಡಿದದ್ದು. " ಮಾತೆಂಬುದು ಜ್ಯೋತಿರ್ಲಿಂಗ! ಸ್ವರವೆಂಬುದು ಪರತತ್ತ್ವ " ಎಂದು. ನಾವರಿಯಬೇಕಾದುದು ಮನಸ್ಸನ್ನು ನಿರ್ಮಲಗೊಳಿಸುವ ನುಡಿಯೆಂದರದು ಗೀತೋಪದೇಶವೆಂದು. ನಾವು ಸತ್ಯೋಪಾಸಕರಾದರೆ ಸತ್ಯಸಾಕ್ಷಾತ್ಕಾರ. ಇದರಿಂದಲೇ ವ್ಯಕ್ತಿತ್ವ ವಿಕಸನ. ನಮ್ಮ ಬದುಕ ಪಯಣದಲ್ಲಿ ನಾವು ಕಂಡಿದ್ದಿಷ್ಟು; ಕೇಳಿದುದು ಒಂದಿಷ್ಟು. ಆದರೆ ನಮಗರಿವಿರದಿರುವುದೆಂದರೆ,

ಕಾಣದೆಯೆ ಕೇಳದೆಯೆ ನೆನೆಯದಿರುವುದೆಷ್ಟೋ! ಎಂಬುದು. ಎಲ್ಲಿ ಏನೇನಿದೆ ಎಂಬುದನ್ನು ಅರುತವರಾರು?

ನಮ್ಮೀ ಬಾಳಿನಲ್ಲಿ ನಮ್ಮ ಮತಿಗೆ ನಿಲುಕದಿರುವುದು ಬೇಕಾದಷ್ಟಿದೆ. ನಿಲುಕಿದುದರಲ್ಲಿ ರೂಪ ತಳೆದದ್ದೆಷ್ಟೋ ಎಂಬುದೂ ಅರಿವಿನಲ್ಲಿದೆ.

ನಮ್ಮೀ ಬಾಳು ಅಂಟದಂಟದ ತೆರದ ಕಮಲದೆಲೆ ಯಂತಿರಬೇಕು. ಆಗ ಬಂದದ್ದೆಲ್ಲವನ್ನೂ ಜೀರ್ಣಿಸಿಕೊಂಡು ಮತ್ತೆ ಹೊಸ ಆಸೆಯಲ್ಲಿ ದಿನತೆಗೆಯಲು ಸಾಧ್ಯ. ಬದುಕನ್ನು ಅರಳಿಸಲೂ ಸಾಧ್ಯ. ಆದರೆ ನಮ್ಮಿಚ್ಛೆ ನಮ್ಮ ಸುಂದರ ಮನಸ್ಸು ನಮ್ಮ ಬದುಕನ್ನು ಸ್ವರ್ಗವಾಗಿಸಲಿ ಎಂಬಾಸೆಯಲ್ಲಿ ಬದುಕಿನಲ್ಲಿ ಸದಾ ಒಳಿತಿರಲೆಂದು ದೈವವನ್ನು ನೆನೆಯುತ್ತಿದ್ದರೆ ಭಾವಶುದ್ಧತೆಯಿಂದ ಹಸಿರಾದ ಕನಸಿನಾನಂದವ ಕಂಡು ಸಂತೃಪ್ತರಾಗಿ ಆತ್ಮಶಾಂತಿಯಿಂದ ಕಂಗೊಳಿಸಬಹುದು.

# ಮಾನಸಿಕ ನೆಮ್ಮದಿ



ಸ್ನೇಹಾ ಆನಂದ್



ದೈಹಿಕ ಸಮಸ್ಯೆಗೆ ಮಾನಸಿಕ ಒತ್ತಡವೇ ಕಾರಣ!

ಇದು ಎಲ್ಲರಿಗೂ ಗೊತ್ತು, ಮುಖ್ಯವಾಗಿ ರಕ್ತದೊತ್ತಡ, ಸಕ್ಕರೆಯ ಖಾಯಿಲೆ ನೇರವಾಗಿ ಮಾನಸಿಕ ಒತ್ತಡದಿಂದಲೇ ಬರುವುದು ಎಂದರೆ ತಪ್ಪಲ್ಲ! ಇವೆರಡು ಸಮಸ್ಯೆಗಳು ನೇರವಾಗಿ ಹೃದಯಕ್ಕೆ ಬಾಧಕ !

ಮನದ ನೆಮ್ಮದಿ ಇರದಿದ್ದರೆ ಅದು ನೇರವಾಗಿ ದೈಹಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ! ಯೌವನದಲ್ಲಿ ಮಾನಸಿಕ ಒತ್ತಡವನ್ನು ತಡೆದುಕೊಂಡಂತೆ ವ್ಯಕ್ತಿಯು ಮಧ್ಯಮ ವಯಸ್ಸಿನಲ್ಲಿ ತಡೆದುದುಕೊಳ್ಳುವುದು ಸ್ವಲ್ಪ ಕಷ್ಟ, ಆದರೆ ಅದೇ ಸಮಯದಲ್ಲೇ ಕುಟುಂಬವು ಹಿಗ್ಗಿ ದೊಡ್ಡದಾಗಿರುತ್ತದೆ!

ಮಗ, ಸೊಸೆ, ಮಗಳು, ಅಳಿಯ, ಮಕ್ಕಳು ಹೀಗೆ ಕುಟುಂಬ ದೊಡ್ಡದಾಗಿ ಬೆಳೆದು ಬಂದಾಗ ಜವಾಬ್ದಾರಿ ಜಾಸ್ತಿಯಾಗಿ ಮನಸ್ಸಿನ ನಿಯಂತ್ರಣ ಕಳೆದುಕೊಂಡರೆ ದೈಹಿಕ ಆರೋಗ್ಯವೂ ಆಚೆ ಈಚೆಯಾಗುತ್ತದೆ!

ಅದರಿಂದ ದೈಹಿಕ ಆರೋಗ್ಯದಲ್ಲಿ ಮೊದಲು ಕಂಡು ಬರುವುದು ರಕ್ತದೊತ್ತಡ ನಂತರ ಸಕ್ಕರೆ ಖಾಯಿಲೆ!

ಇವೆರಡೂ ಅನುವಂಶೀಯವಾಗಿಯೂ ಬರಬಹುದು, ಇಲ್ಲ,,, ಮನಸಿನ ಮೇಲೆ ಬೀರಿದ ಪರಿಣಾಮವೂ ಕಾರಣವಾಗಿರಬಹುದು, ದಿನ ನಿತ್ಯದ ಆಹಾರ ಕ್ರಮದಿಂದಲೂ ಇರಬಹುದು !

ನಮ್ಮ ಹಿರಿಯರಿಗೆ ಯಾವ ಕಾಯಿಲೆಯೂ ಇಲ್ಲ ಹೀಗಾಗಿ ನನಗೂ ಬರುವುದೇ ಇಲ್ಲ ಎನ್ನುವುದು ಸುಳ್ಳು, ಏಕೆಂದರೆ ಈಗೀನ ಆಚಾರ, ವಿಚಾರ, ಯೋಚನೆ, ಆಹಾರ ಕ್ರಮ, ಇವು ಕೂಡ ದೈಹಿಕ ಆರೋಗ್ಯದ ಮೇಲೆ ಪ್ರಭಾವ ಬೀರುತ್ತವೆ!

ಜಗತ್ತು ಆಧುನಿಕಗೊಂಡಂತೆ ನಮ್ಮ ಜೀವನ ಕ್ರಮವೂ ಬದಲಾಗುತ್ತಿದೆ, ಇದರಿಂದ ದೈಹಿಕ ಬೊಜ್ಜು ಕೂಡ ಜಾಸ್ತಿಯಾಗಿ ಈ ಖಾಯಿಲೆಗಳು ದೇಹದ ಒಳಗೆ ಸೇರಬಹುದು!

ಊಟ ಜಾಸ್ತಿ ಕೆಲಸ ಕಡಿಮೆಯಾದರೂ ನಮ್ಮ ದೈಹಿಕ ಆರೋಗ್ಯದಲ್ಲಿ ವ್ಯತ್ಯಾಸವಾಗುತ್ತದೆ, ನಮ್ಮ ಹಿರಿಯರು ತೊಂಬತ್ತು ವರ್ಷಗಳವರೆಗೂ ಯಾವುದೇ ಖಾಯಿಲೆಯಿಲ್ಲದೇ ಬದುಕುತ್ತಿದ್ದರು, ಈಗ ಮೂವತ್ತು ವರ್ಷ ಮೇಲ್ಪಟ್ಟರೆ ಸಾಕು ರಕ್ತದೊತ್ತಡ , ಸಕ್ಕರೆ ಖಾಯಿಲೆ ಎರಡೂ ಅಣ್ಣ ತಮ್ಮಂದಿರಂತೆ ಬಂದು ವಕ್ಕರಿಸುತ್ತವೆ,



ಇದನ್ನು ಧಿಕ್ಕರಿಸಿ ಮುಂದೆ ನಡೆಯಲು ಆಹಾರ ಪದ್ಧತಿಯ ಬದಲಾವಣೆ ಹಾಗು ಮಾನಸಿಕ ನೆಮ್ಮದಿ ಇದ್ದರೆ ಮಾತ್ರ ಸಾಧ್ಯ!

ನಮ್ಮ ಹಿರಿಯರು ದಿನವೂ ಬಟ್ಟಲುಗಟ್ಟಲೇ ತುಪ್ಪ ತಿಂದರೂ ಅವರಿಗೆ ಬೊಜ್ಜು ಇರುತ್ತಿರಲಿಲ್ಲ, ಅದಕ್ಕೆ ಕಾರಣ ಅವರಿಗೆ ನಡಿಗೆ ಅಥವಾ ಸೈಕಲ್ ಸವಾರಿ ಎರಡೇ ಇದ್ದವು!

ಎರಡರಿಂದಲೂ ದೇಹಕ್ಕೆ ಒಳ್ಳೆಯ ವ್ಯಾಯಾಮ ದೊರಕುತ್ತಿತ್ತು!

ಈಗ ಹಾಗಲ್ಲ ನಡೆದು ಬರಬೇಕು ಎಂದರೂ ರಸ್ತೆಯಲ್ಲಿ ಜಾಗ ಇರುವುದಿಲ್ಲ ಇದರಿಂದ ಎಲ್ಲಾ ಕಡೆಗೂ ಕಾರು, ಗಾಡಿ ತೆಗೆದುಕೊಂಡು ಹೋಗುವ ಅಭ್ಯಾಸವಾಗಿದೆ ! ಹೀಗಾಗಿ ನಿಗದಿತ ಸಮಯದಲ್ಲಿ ವಾಯು ವಿಹಾರಕ್ಕೆ ಹೋಗುವುದು ಅನಿವಾರ್ಯವಾಗಿದೆ, ಆದರೆ ಜೊತೆಗೆ ವಾಹನಗಳ ಹೊಗೆ, ಧೂಳು ಇವು ಕೂಡ ನಮ್ಮ ದೇಹ ಸೇರುತ್ತವೆ, ಒಂದು ಸಮಸ್ಯೆ ನಿಲ್ಲಿಸಲು ಹೋದರೆ ಇನ್ನೊಂದು ಸಮಸ್ಯೆ ಕಾಡುವ ಹಾಗೆ ಈ ಕಲುಷಿತ ಮಾಲಿನ್ಯ !

ಹೀಗಾಗಿ ಎಲ್ಲರ ಮನೆಯ ಮುಂದೆ ಸರಿಯಾದ ಸ್ಥಳ ಸಿಗದೇ ಅವರು ಹೊರಗೆ ಹೋಗದೆ ಮನೆಯಲ್ಲೇ ಉಳಿದು ಬಿಡುತ್ತಾರೆ, ಇದರಿಂದಲೂ ಬೊಜ್ಜು ಶೇಖರಣೆ ಜಾಸ್ತಿಯಾಗಿ ಈ ಎರಡು ಕಾಯಿಲೆಗಳು ಬೇಗ ದೇಹ ಸೇರಿ ಬಿಡುತ್ತವೆ!

ಜನರ ಆರ್ಥಿಕತೆಯ ಜೀವನ ಮೇಲ್ಮಟ್ಟಕ್ಕೆ ಹೋದಂತೆ ಜೀವಿತಾವಧಿಯ ಸಮಯ ಕೆಳಮಟ್ಟಕ್ಕೆ ಇಳಿಯಲು ಪ್ರಾರಂಭವಾಗಿದೆ, ಜಗತ್ತು ಆಧುನಿಕಗೊಂಡಷ್ಟು ಮಾನಸಿಕ ತಜ್ಞರ ಅವಶ್ಯಕತೆ ಜಾಸ್ತಿಯಾಗಿದ್ದು, ಸ್ವಲ್ಪ ಮನಸ್ಸಿನ ನೆಮ್ಮದಿ, ಕಣ್ತುಂಬಾ ನಿದ್ದೆಗೆ ಜನರು ಹಪಹಪಿಸುತಿದ್ದಾರೆ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,